ಜ್ಯೋತಿಯೇ ಆಗು ಜಗಕೆಲ್ಲ

ಗೃಹಸ್ಥನಿಗೆ ಜನಪದ ನೀತಿ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಪ್ರೊ. ಡಿ. ಲಿಂಗಯ್ಯ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೫

ಜ್ಯೋತಿಯೇ ಆಗು ಜಗಕೆಲ್ಲ

ಗೃಹಸ್ಥನಿಗೆ ಜನಪದ ನೀತಿ

ಪ್ರೊ. ಡಿ. ಲಿಂಗಯ್ಯ
690, 7ನೇ ಬ್ಲಾಕ್, 2ನೇ ಫೇಸ್,
ಬನಶಂಕರಿ 3ನೇ ಹಂತ, ಬೆಂಗಳೂರು – 560 085

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇಔಟ್,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

JYOTHIYE AAGU JAGAKELLA -
Folk Ethis to House Holder - by Prof. D. LINGAIAH.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ : ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು
ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಪ್ರೊ. ಡಿ. ಲಿಂಗಯ್ಯ** ಅವರು **ಜ್ಯೋತಿಯೇ ಆಗು ಜಗಕೆಲ್ಲ** ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೬-೦೧-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಜ್ಯೋತಿಯೇ ಆಗು ಜಗಕೆಲ್ಲ

ಮನುಕುಲ ವಿಕಾಸದ ಅಧ್ಯಯನದಿಂದ ಮಾತೃಪ್ರಧಾನ ಸಾಮಾಜಿಕ ವ್ಯವಸ್ಥೆ ಪ್ರಧಾನವಾಗಿದ್ದುದು ದೃಢಪಟ್ಟಿದೆ. ಕಾಲಕ್ರಮದಲ್ಲಿ ಆ ವ್ಯವಸ್ಥೆ ಬದಲಾಗಿ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ ಪ್ರಾರಂಭಗೊಂಡಿದೆ. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಹುಟ್ಟಿದ ಮನೆಯಲ್ಲೇ ಕೊನೆಯವರೆಗೂ ಇರುತ್ತಿದ್ದಳು. ಅನ್ಯರ ಮನೆಯ ಗಂಡು ಗಂಡನಾಗಿ ಹೆಂಡಿತಿಯ ಮನೆಯಲ್ಲಿ ಇರಬೇಕಾಗಿತ್ತು. ಆಗ ಗಂಡಿಗೆ ಹುಟ್ಟಿದ ಮನೆ ತಾತ್ಕಾಲಿಕವಾಗಿತ್ತು. ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿದ ಹೆಣ್ಣು ತವರು ಮನೆಯನ್ನು ತೊರೆದು ಹೆಂಡತಿಯಾಗಿ ಅಥವಾ ಸೊಸೆಯಾಗಿ ಅನ್ಯರ ಮನೆಯನ್ನು ಸೇರಬೇಕಾಯಿತು. ಗಂಡು ತಾನು ಹುಟ್ಟಿದ ಮನೆಯಲ್ಲೇ ಜೀವನ ಪೂರ್ತಿ ಇರುವಂತಾಯಿತು. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಆಸ್ತಿಯ ಹಕ್ಕು ಮನೆಯ ಹೆಣ್ಣು ಮಗಳಿಗಿತ್ತು. ಅದು ಪುರುಷಪ್ರಧಾನ ವ್ಯವಸ್ಥೆಯಲ್ಲಿ ಗಂಡಿಗೆ ವರ್ಗವಾಯಿತು. ಆಸ್ತಿಯ ಹಕ್ಕು ಹೆಣ್ಣು ಗಂಡಿನ ಸ್ಥಾನಮಾನವನ್ನೇ ಸಂಪೂರ್ಣವಾಗಿ ಬದಲಾಯಿಸಿತು. ಅದರಂತೆ ಕರುಳು ಬಳ್ಳಿಯ ಸಂಬಂಧದಲ್ಲೂ ವ್ಯತ್ಯಾಸವಾಯಿತು.

ಮಾತೃಪ್ರಧಾನವಾದ ಸಾಮಾಜಿಕ ಸಾಂಸಾರಿಕ ವ್ಯವಸ್ಥೆಯಲ್ಲಿ ಗಂಡನಾಗಿ ಹೆಂಡತಿಯ ಮನೆಯಲ್ಲಿ ಉಳಿಯುತ್ತಿದ್ದ ಗಂಡಸಿಗೆ ಹುಟ್ಟಿದ ಮನೆಯ, ಹುಟ್ಟಿಗೆ ಕಾರಣರಾದ ತಾಯಿ ತಂದೆಯರ, ಒಡಹುಟ್ಟಿದವರ ನೆನಪು ಕಾಡುತ್ತಿರಲಿಲ್ಲವೆ? ಗಂಡಿಗೆ ತವರು ಮನೆಯ ಸೆಳೆತವಿರಲಿಲ್ಲವೆ? ಇದ್ದರೆ ಅದು ಹಾಡಿನ ರೂಪದಲ್ಲೋ ಮತ್ತೊಂದು ರೂಪದಲ್ಲೋ ಏಕೆ ಪ್ರಕಟವಾಗಿಲ್ಲ? ಅಭಿವ್ಯಕ್ತಿಗೊಂಡಿದ್ದರೆ ಒಂದಾದರೂ ಏಕೆ

ಉಳಿದಿಲ್ಲ? ಕನ್ನಡದ ಸಮಸ್ತ ಜನಪದ ಸಾಹಿತ್ಯವನ್ನು ಜಾಲಾಡಿಸಿದರೂ ಗಂಡಿನ ತವರು ಮನೆಯ ಸೆಳೆತದ ಅಥವಾ ಹಂಬಲದ ಒಂದಾದರೂ ಗೀತೆ ದೊರೆಯದಿರಲು ಕಾರಣವೇನು? ಮಾತೃಪ್ರಧಾನ ವ್ಯವಸ್ಥೆಯ ಸಂದರ್ಭದಲ್ಲಿ ಅಂಥ ಅಭಿವ್ಯಕ್ತಿ ಹುಟ್ಟಿಲ್ಲ ಎಂದುಕೊಳ್ಳಬೇಕೆ? ಹುಟ್ಟಿದ್ದರೂ ಕಾಲಗರ್ಭದಲ್ಲಿ ಮರೆಯಾಗಿದೆಯೆಂದು ಸಮಾಧಾನ ಪಟ್ಟುಕೊಳ್ಳಬೇಕೆ?

ಮಾತೃಪ್ರಧಾನ ಸಾಮಾಜಿಕ ವ್ಯವಸ್ಥೆ ಈಗಲೂ ಸಂಪೂರ್ಣವಾಗಿ ಅಳಿಸಿಹೋಗಿಲ್ಲ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ, ಮುಖ್ಯವಾಗಿ ತುಳುನಾಡಿನಲ್ಲಿ ಈಗಲೂ ಅಳಿಯಕಟ್ಟು ಇದೆ. ಅಲ್ಲಾದರೂ ಗಂಡಿನ ತವರಿನ ಹಂಬಲ ಹಾಡಾಗಿ ಹರಿಯಬಹುದಿತ್ತಿಲ್ಲ? ಏಕಿಲ್ಲ? ಗಂಡಿಗೆ ತೌರಿನ ಹಂಬಲವೇ ಇರುವುದಿಲ್ಲವೆ? ತಾಯಿ ತಂದೆಯರ ನೆನಪೇ ಬರುವುದಿಲ್ಲವೆ? ಇದು ಹೆಣ್ಣಿಗೆ ಮಾತ್ರ ಸೀಮಿತವೆ? ಇದಕ್ಕೆ ಸ್ಪಷ್ಟವಾದ ಉತ್ತರವಿಲ್ಲ.

ಅವಿಭಕ್ತ ಕುಟುಂಬದ ವ್ಯವಸ್ಥೆಯಲ್ಲಿ, ಪುರುಷ ಪ್ರಧಾನ ಸಮಾಜದಲ್ಲಿ, ಸ್ತ್ರೀಗೆ ನೀತಿಬೋಧೆ ಮಾಡಿರುವುದು ವಿಶೇಷವಾಗಿ ಕಂಡುಬರುತ್ತದೆ. ಅಂದಮಾತ್ರಕ್ಕೆ ಪುರುಷನಿಗೆ ನೀತಿಬೋಧೆ ಮಾಡಿಲ್ಲ ಎಂದಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ನೀತಿಬೋಧೆ ಸ್ತ್ರೀಗೂ ಬೇಕು, ಪುರುಷನಿಗೂ ಬೇಕು. ಪುರುಷನನ್ನು ಪ್ರಧಾನವಾಗಿಟ್ಟುಕೊಂಡು ಮಾಡಿರುವ ನೀತಿಬೋಧೆಯೂ ಚುರುಕಾಗಿದೆ, ಜನಹಿತಕಾರಿಯಾಗಿದೆ. ಸಂಸಾರದ ಹಿರಿಯ ಸ್ತ್ರೀಯರು, ಪುರುಷರು, ತಿಳಿವಳಿಕೆಯುಳ್ಳವರು, ಸಮಯಾನುಸಂದರ್ಭ ಬಂದಂತೆ ಪುರುಷರಿಗೆ ನೀತಿಮಾತು ಹೇಳಿರುವುದುಂಟು. ಬಹಳಷ್ಟು ನಿರ್ದಿಷ್ಟ ಘಟನೆಗಳ ಸಂದರ್ಭದಲ್ಲಿ ಹುಟ್ಟಿರಬಹುದಾದರೂ ಕೆಲವು ನೀತಿಮಾತು ಸಮಯ ಸಂದರ್ಭಗಳನ್ನು ಮೀರಿ ಪ್ರಭಾವ ಬೀರುತ್ತವೆ.

ಆಚಾರಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು - ನನ ಕಂದ
ಜ್ಯೋತಿಯೇ ಆಗು ಜಗಕೆಲ್ಲ.

ಆಚಾರವಂತನಿಗೆ ಪೂರ್ಣ ಆಯಸ್ಸು, ಆಚಾರ ಕೆಟ್ಟವನಿಗೆ ಅರ್ಧ ಆಯಸ್ಸು ಎಂಬ ಮಾತಿದೆ. ವ್ರತಕೆಟ್ಟರೂ ಆಚಾರ ಕೆಡಬಾರದು ಎಂಬ ವ್ಯಂಗ್ಯೋಕ್ತಿಯೂ ಇದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಆಚಾರಕ್ಕೆ ಅಗ್ರಸ್ಥಾನ. ಆಚಾರವಂತರಿಗೆ ಮನ್ನಣೆ. ಸದ್ಗೃಹಸ್ಥ ಆಚಾರವನ್ನು ಮನ್ನಿಸಬೇಕು, ಅನುಸರಿಸಬೇಕು, ಇತರರು ಅನುಸರಿಸಲು ಆದರ್ಶವಾಗಬೇಕು. ರಾಜನಾದವನು ರಾಜ್ಯಕ್ಕೆ ಅರಸನಾದರೆ, ಸಂಸಾರಸ್ಥ ಆಚಾರಕ್ಕೆ ಅರಸನಾಗಬೇಕು. ಸ್ವಾಸ್ಥ್ಯಬದುಕಿಗೆ ಆಚಾರ ಎಷ್ಟು ಮುಖ್ಯವೋ ನೀತಿಯೂ ಅಷ್ಟೇ ಮುಖ್ಯ. ನೈತಿಕ ಎಲ್ಲೆಕಟ್ಟಿನಲ್ಲಿ ಬದುಕು ಮಾಡುವವನನ್ನು ಸಮಾಜ ಗೌರವಿಸುತ್ತದೆ. ಅನೀತಿವಂತನನ್ನು ಯಾರೂ ಮಾನ್ಯಮಾಡುವುದಿಲ್ಲ. ಮನುಷ್ಯನಾದವನು ದರ್ಪಕ್ಕೆ ಪ್ರಭುವಾಗಬಾರದು, ನೀತಿಗೆ ಪ್ರಭುವಾಗಬೇಕು. ನೀತಿ ಹೇಳೋಕೆ ಬದನೆಕಾಯಿ ತಿನ್ನೋಕೆ ಎಂಬಂತೆ ಗೋಸುಂಬೆಯಾಗಿ ಬದುಕಬಾರದು. ಇನ್ನೊಬ್ಬರಿಗೆ ಉಪದೇಶಿಸುವುದಕ್ಕೆ ನೀತಿಯನ್ನು ಕಂಠಪಾಠ ಮಾಡಿ ಬಳಸಕೂಡದು. ಇತರರಿಗೆ ಹೇಳುವ ಮೊದಲು ತಾನೇ ನೀತಿವಂತನಾಗಿ ಬದುಕಬೇಕು. ಮಾತೆಂಬುದು ಜ್ಯೋತಿರ್ಲಿಂಗವೆಂದಿದ್ದಾನೆ ಅನುಭಾವಿ ಅಲ್ಲಮಪ್ರಭು. ನುಡಿದರೆ ಲಿಂಗಮೆಚ್ಚಿ ಅಹುದು ಅಹುದು ಎನಬೇಕು ಎಂದಿದ್ದಾನೆ ಬಸವಣ್ಣ. ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎಂಬ ಗಾದೆಯೂ ಇದೆ. ಮಾತು ಮಂತ್ರಕ್ಕೆ ಸಮ. ಅರ್ಥಪೂರ್ಣವಾಗಿ ಮಾತಾಡಿದರೆ ಶೋಭೆ, ತಲೆಯಲ್ಲಿ ಧರಿಸುವ ಶ್ರೇಷ್ಠವಾದ ರತ್ನದ ಆಭರಣದಂತೆ ಮಾತು ಮೌಲಿಕವಾದದ್ದು. ಬಾಯಿಬಿಟ್ಟರೆ ಬಣ್ಣಗೇಡು ಎಂಬಂತೆ ಮಾತಾಡಬಾರದು. ಸದ್ಗುಣಿಯಾಗಿ ಜಗತ್ತಿಗೆಲ್ಲ

ಜ್ಯೋತಿಯಾಗಬೇಕೆಂದು ಜನಪದ ಗೃಹಿಣಿ ತನ್ನ ಮಗನಿಗೆ ತಿಳಿಸಿ ಹೇಳಲು ಬಯಸಿದ್ದಾಳೆ. ಗೌತಮ ಬುದ್ಧನನ್ನು ಏಷ್ಯಾ ಖಂಡದ ಬೆಳಕು ಎನ್ನುವುದುಂಟು. ಬಸವಣ್ಣನನ್ನು ಜಗಜ್ಯೋತಿ ಬಸವಣ್ಣನೆಂದು ಬಣ್ಣಿಸುವುದುಂಟು. ನಿಸ್ವಾರ್ಥ ಬದುಕಿನಿಂದ ಜಗತ್ತಿಗೆಲ್ಲಾ ಬೇಕಾಗುವಂಥ ವ್ಯಕ್ತಿತ್ವವನ್ನು ಗಳಿಸಿಕೊಂಡು ಮಕ್ಕಳು ಬೆಳೆಯಬೇಕೆಂಬುದು ತಾಯಿ ತಂದೆಯರ ಬಯಕೆ. ಮಕ್ಕಳನ್ನು ಬಾಲ್ಯದಿಂದಲೇ ನೀತಿಯ ನೆಲಗಟ್ಟಿನಲ್ಲಿ ಬೆಳೆಸಿದರೆ ಅಂಥ ಮಕ್ಕಳು ಪರೋಪಕಾರಿಗಳಾಗಿ ಬೆಳೆಯುತ್ತಾರೆ, ಬೆಳಗುತ್ತಾರೆ. ಬಾಲ್ಯದ ಬೋಧೆ ಕೆಟ್ಟರೆ ಭವಿಷ್ಯದಲ್ಲಿ ಮಕ್ಕಳೂ ಕೆಡುತ್ತಾರೆ.

ತನ್ನಂಗ ನೋಡಿದರ ಭಿನ್ನಿಲ್ಲ ಭೇದಿಲ್ಲ
ತನ್ನಂಗ ತನ್ನ ಮಕ್ಕಳಂಗ – ನೋಡಿದರ
ಕಣ್ಣ ಮುಂದಾದ ಕೈಲಾಸ.

ಜಾತಿ ಮತ ವರ್ಗ ಮೊದಲಾದ ಕಾರಣಗಳಿಂದ ಮನುಷ್ಯ ಮನುಷ್ಯರ ನಡುವೆ ಭೇದಭಾವ ಮಾಡಬಾರದು. ಹಾಗೆ ಮಾಡುವುದು ಮನುಷ್ಯತ್ವ ಎನಿಸಿಕೊಳ್ಳುವುದಿಲ್ಲ. ಹೆಣ್ಣಾಗಲೀ ಗಂಡಾಗಲೀ ತನ್ನ ಹಾಗೆಯೇ ಇತರರು ಎಂದು ಪರಿಭಾವಿಸಿದರೆ ಭಿನ್ನಭೇದ ಇರುವುದಿಲ್ಲ. ಇತರ ಪುರುಷರು ತನ್ನ ಹಾಗೆ, ಇತರ ಸ್ತ್ರೀಯರು ತನ್ನ ಹೆಂಡತಿ, ಮಗಳ ಹಾಗೆ ಎಂದು ಕಂಡರೆ ಮನುಷ್ಯನ ಬಾಳು ಶುಚಿಯಾಗಿರುತ್ತದೆ. ಅಂಥವರಿಗೆ ದೇವರ ಸಾನಿಧ್ಯ ಹತ್ತಿರವಾಗುತ್ತದೆ. ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ ಮನುಕುಲ ಅನೇಕ ನೀತಿಮಾತುಗಳನ್ನು ಕಂಡರಿಸಿದೆ. ಉದಾಹರಣೆಗೆ: ಅನ್ಯರಿಗೆ ಅಸಹ್ಯ ಪಡಬಾರದು. ಪರನಾರಿ ಸೋದರರಂತಿರಬೇಕು. ಸಕಲರಿಗೆ ಲೇಸನ್ನು ಬಯಸಬೇಕು. ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು. ಅಸಹಾಯಕ ಸ್ತ್ರೀ ಪುರುಷರನ್ನು ಶೋಷಿಸಬಾರದು. ಸಮಾಜ ಸಂಸಾರ ಸ್ವಾಸ್ಥ್ಯಕ್ಕೆ ಪೂರಕವಾಗುವ ಲೋಕ ರೂಢಿಯ ನೀತಿ ಮಾತುಗಳನ್ನು ಅನುಸರಿಸಿ ಅದರಂತೆ

ನಡೆಯುವುದು ವ್ಯಷ್ಟಿಗೂ ಸಮಷ್ಟಿಗೂ ಕ್ಷೇಮ. ಶ್ರೇಣೀಕೃತ ಸಮಾಜದಲ್ಲಿ ಬದುಕುವವರಿಗೆ ಈ ಬಗೆಗೆ ಸದಾ ಎಚ್ಚರವಿರಬೇಕು.

ಹೇಳುವೆ ಕೇಳ್ತಮ್ಮ ಮುತ್ತಿನಂಥ ಮಾತ
ಸತ್ಯುಳ್ಳ ಶರಣರು ಹೇಳಿದ – ಮಾತ ನೀ
ಚಿತ್ತದಲ್ಲಿರಿಸಿ ಕೇಳಬೇಕ.

ಸುಳ್ಳು ಹೇಳಲಿ ಬೇಡ ಕಳವು ಮಾಡಲಿಬೇಡ
ಒಳ್ಳೇ ಹಾದಿಯ ಬಿಡಬೇಡ – ನನ ತಮ್ಮ
ಹೊಳ್ಳಿ ನೋಡಬೇಡ ಪರಹೆಣ್ಣ.

ಒಳ್ಳೆಯವರ ಗೆಳೆತನ ಕಲ್ಲಸಕ್ಕರಿಯಂಗ
ಕ್ಷುಲ್ಲರ ಗೆಳೆತನ ಮಾಡಿದರ – ನನ ತಮ್ಮ
ಸಲ್ಲದ ಮಾತು ಬರತಾವ.

ಕೊಟ್ಟ ವಚನ ತಪ್ಪಬಾರದು
ನೆಟ್ಟನೆ ಪ್ರಾಣ ಹೋದರು – ಕಲಿಕರ್ಣ
ಕೊಟ್ಟ ಮಾತ ತಾ ಬಿಡಲಿಲ್ಲ.

ಸತ್ಯವಂತ ಶರಣರು ಅನುಭವದಿಂದ ಅರಿತುಕೊಂಡು ಹೇಳಿರುವ ಮುತ್ತಿನಂತಹ ನೀತಿಮಾತುಗಳನ್ನು ಮನಸ್ಸಿಟ್ಟು ಕೇಳಿ ಅನುಸರಿಸಬೇಕು.

ಮನುಷ್ಯನಾದವನು ಸುಳ್ಳು ಹೇಳಬಾರದು, ಸತ್ಯವಂತನಾಗಿರಬೇಕು. ಕಳ್ಳತನ ಮಾಡಬಾರದು; ದುಡಿದು ಉಣ್ಣಬೇಕು. ಸಜ್ಜನರು ತೋರುವ ಉತ್ತಮ ದಾರಿಯನ್ನು ಬಿಡದೆ ಅನುಸರಿಸಬೇಕು. ಪರಸ್ತ್ರೀಯನ್ನು ಕಣ್ಣೆತ್ತಿ ನೋಡಬಾರದು.

ಒಳ್ಳೆಯವರ ಸ್ನೇಹವನ್ನು ಮಾಡಬೇಕು. ಅದು ಕಲ್ಲು ಸಕ್ಕರೆಯಂತೆ ಸಿಹಿಯಾಗಿರುತ್ತದೆ. ಕೆಟ್ಟ ಸ್ನೇಹ ಅನಾಹುತ ತರುತ್ತದೆ. ಖೂಳರ

ಸಹವಾಸ ಮಾಡಬಾರದು. ಅದರಿಂದ ಕೆಟ್ಟ ಅಪವಾದ ಬರುತ್ತದೆ. ಸಹವಾಸ ದೋಷ ಯಾವ ಕಾಲಕ್ಕೂ ಯಾರಿಗೂ ಶ್ರೇಯಸ್ಕರವಲ್ಲ.

ಮನುಷ್ಯನಿಗೆ ನಾಲಿಗೆ ಮಾತು ಮುಖ್ಯ. ಕೊಟ್ಟಮಾತಿಗೆ ತಪ್ಪಬಾರದು. ಪ್ರಾಣಹೋಗುವ ಸಂದರ್ಭದಲ್ಲೂ ಮಹಾಭಾರತದ ದಾನಶೂರ ವೀರ ಕರ್ಣ ಕೊಟ್ಟಮಾತಿಗೆ ತಪ್ಪಲಿಲ್ಲ. ಅಂಥ ಉದಾತ್ತರ ಜೀವನ ಆದರ್ಶವಾಗಬೇಕು.

ಶಿವದಾಸರಲ್ಲಿ ಹರಿದಾಸರಲ್ಲಿ ಅನುಭಾವಿಗಳಲ್ಲಿ ಇಂಥ ಅನೇಕ ನೀತಿಮಾತುಗಳು ಹೊರಹೊಮ್ಮಿರುವುದನ್ನು ನೆನಪಿಸಿಕೊಳ್ಳಬಹುದು.

ಶೌರ್ಯ ನೋಡಿ ಸೈನ್ಯ ಮಣ್ಣನೆ ಮುಕ್ಕಿ ಬಿಟ್ಟಿತಣ್ಣ
ಶೌರ್ಯ ತೋರಿಸಿರಣ್ಣಾ ದೇಶದ ಮಾನ ಕಾಯಿರಣ್ಣ
ಎಮ್ಮ ದೇಶಕ್ಕಿಂತ ದೇವರಿಲ್ಲಣ್ಣ,
ನಮ್ಮ ದೇಶದ ಮಾನ ಕಾಯಿರಣ್ಣ.

ನರಗುಂದ ಬಂಡಾಯದ ಲಾವಣಿಯ ಈ ತುಣುಕು ದೇಶಭಕ್ತಿಯನ್ನು ಉದ್ದೀಪಿಸುತ್ತದೆ. ಯುವಜನಾಂಗಕ್ಕೆ ದೇಶಭಕ್ತಿಯಿರಬೇಕು. ದೇಶಭಕ್ತಿಯಿಲ್ಲದಿದ್ದರೆ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಶೌರ್ಯ ಪ್ರದರ್ಶಿಸದ ಶತ್ರುಸೈನ್ಯ ಹಿಂದೆ ಸರಿಯುತ್ತದೆ. ಶೌರ್ಯದಿಂದಿದ್ದರೆ ದೇಶದ ಮಾನ ಉಳಿಯುತ್ತದೆ. ದೇಶವೇ ದೇವರು. ದೇಶದ ಮಾನಕಾಯುವುದೇ ದೇಶವಾಸಿಗಳ ಕರ್ತವ್ಯ. ಅಂಥವರನ್ನೇ ದೇಶಭಕ್ತರೆಂದು ಗುರುತಿಸಿ ಲೋಕ ಕೊಂಡಾಡುವುದು.

ಕೆಂಪು ಹೆಂಡತಿಯೆಂದು ಸಂತೋಷ ಪಡಬ್ಯಾಡ
ಅತ್ತಿಯ ಹಣ್ಣು ಅತಿ ಕೆಂಪು – ಇದ್ದರು
ಒಡೆದು ನೋಡಿವರೆ ಹುಳ ಭಾಳ

ಹೆಣ್ಣು ಗಂಡಿನ ಮೈಬಣ್ಣದ ಜಿಜ್ಞಾಸೆ ಜನಪದರನ್ನೂ ಬಿಟ್ಟಿಲ್ಲ. ಬಣ್ಣಗಳಲ್ಲಿ

ಕಪ್ಪು ಕನಿಷ್ಟ, ಬಿಳಿ ಶ್ರೇಷ್ಟವೆಂಬ ಕಲ್ಪನೆ ಯಾವಾಗಲೋ ಪ್ರಾರಂಭವಾಗಿದೆ. ಭಾರತೀಯರೆಲ್ಲ ಕಪ್ಪು ಜನಾಂಗವೇ. ಕೆಲವರು ಕಡಮೆ ಕಪ್ಪಿರಬಹುದು ಅಷ್ಟೆ. ಕೆಲವು ಸಂದರ್ಭಗಳಲ್ಲಿ ಬಿಳಿಬಣ್ಣದಷ್ಟೇ ಶ್ರೇಷ್ಠ ಕೆಂಪು. ಕೆಂಪು ಕ್ರಾಂತಿಯ ಸಂಕೇತವೂ ಹೌದು, ಪ್ರೀತಿಯ ಸಂಕೇತವೂ ಹೌದು.

ಆಕಸ್ಮಿಕವಾಗಿ ಕೆಂಪು ಹೆಂಡತಿಯನ್ನು ಪಡೆದ ಗಂಡಿನ ಸಂತೋಷವನ್ನು ಜನಪದ ಗೃಹಿಣಿ ಸೂಕ್ಷ್ಮವಾಗಿ ವಿಮರ್ಶಿಸಿದ್ದಾಳೆ. ಹೆಣ್ಣಿಗೆ ಬಣ್ಣ ಮುಖ್ಯವಲ್ಲ; ಗುಣ ಮುಖ್ಯ. ಕತ್ತಿಹಣ್ಣು ನೋಡುವುದಕ್ಕೆ ಕೆಂಪು. ಒಡೆದು ನೋಡಿದರೆ ಒಳಗೆ ಹುಳ ತುಂಬಿರುತ್ತದೆ. ಅಂಥ ಹಣ್ಣನ್ನು ತಿನ್ನುವುದಕ್ಕೆ ಆಗುವುದಿಲ್ಲ. ಗುಣವಿಲ್ಲದ ಹೆಣ್ಣು ನೋಡುವುದಕ್ಕೆ ಕೆಂಪಗಿದ್ದರೂ ಗೌರವಕ್ಕೆ ಪಾತ್ರಳಾಗುವುದಿಲ್ಲ. ಆದ್ದರಿಂದ ಗಂಡಾದವನು ಹೆಂಡತಿಯ ಮೈಬಣ್ಣಕ್ಕಿಂತ ಅವಳ ಗುಣಕ್ಕೆ ಪ್ರಾಶಸ್ತ್ಯ ಕೊಡಬೇಕು. ಮೇಲೆ ತಳಕು, ಒಳಗೆ ಹುಳುಕು ಎಂಬ ಗಾದೆ ಇಂಥ ಹಿನ್ನೆಲೆಯಲ್ಲೇ ಹುಟ್ಟಿರಬೇಕು.

ಚೆಲುವಿ ಚೆಲುವಿಯೆಂತ ಅತಿಬಾಯಿ ಬಿಡಬ್ಯಾಡ
ಚೆಲುವಿದ್ದರೇನು ಗುಣವಿಲ್ಲ – ಕೊಳೆನೀರು
ತಿಳಿಯಿದ್ದರೇನು ರುಚಿಯಿಲ್ಲ.

ಚೆಲುವಿನ ವ್ಯಾಖ್ಯಾನ ಕಷ್ಟ. ಬಹಿರಂಗ ಚೆಲುವಿಗಿಂತ ಅಂತರಂಗದ ಚೆಲುವಿಗೆ ಆದ್ಯತೆ ದೊರಕಬೇಕು. ಚೆಲುವಿಯಾದ ಹೆಣ್ಣು ನಡತೆಹೀನಳಾದರೆ ಏನು ಪ್ರಯೋಜನ? ಶುದ್ಧವಾದ ನೀರಿಗೆ ಬಣ್ಣ ರುಚಿ ಇರುವುದಿಲ್ಲ. ಕೊಳೆಯಾದ ನೀರು ತಿಳಿಯಾಗಿದ್ದರೂ ರುಚಿಯಾಗಿರುವುದಿಲ್ಲ. ಹಾಗೆಯೇ ಹೆಣ್ಣಿನ ಚೆಲುವಿಗೆ ಮಾನ್ಯತೆ ಸಿಗಬೇಕಾದರೆ ಅವಳ ಅಂತರಂಗ ಶುದ್ಧವಾಗಿರಬೇಕು, ನಡತೆ ನಯವಾಗಿರಬೇಕು. ಮನುಷ್ಯ ಸ್ವಭಾವಕ್ಕೂ ಚೆಲುವಿಗೂ ಸಂಬಂಧ

ಕಲ್ಪಿಸಿರುವುದು ಜನಪದರ ಸೌಂದರ್ಯಪ್ರಜ್ಞೆಯ ವಿಶೇಷವಾಗಿದೆ. ಚೆಲುವು ತಿಳಿಯಾದ ನೀರಿನಂತಿರಬೇಕು. ಬಗ್ಗಡವಾದರೆ ವ್ಯರ್ಥ. ಹೆಣ್ಣು ಗಂಡು ಇಬ್ಬರಿಗೂ ಗುಣ ಮುಖ್ಯ. ಗುಣ ಮರೆತರೆ ಅವಗುಣ ಕಟ್ಟಿಟ್ಟಬುತ್ತಿ.

ಕಪ್ಪು ಹೆಂಡತಿಯಂತ ಕರಕರಿ ಮಾಡಬ್ಯಾಡ
ನೀರಲದ ಹಣ್ಣು ಬಲು ಕಪ್ಪು – ಇದ್ದರು
ತಿಂದು ನೋಡಿದರೆ ರುಚಿ ಭಾಳ

ಜನಪದರು ಸೂಕ್ತವಾದ ಸಾಮತಿಗಳಿಂದ ಕಪ್ಪುಬಣ್ಣವನ್ನು ಸಮರ್ಥಿಸಿದ್ದಾರೆ. ಮದುವೆಯಾದ ಮೇಲೆ ಹೆಂಡತಿ ಕಪ್ಪು ಎಂದು ಬೇಸರಪಟ್ಟುಕೊಳ್ಳಬಾರದು. ಹಾಗೆ ಮಾಡಿ ಹೆಂಡತಿಯಿಂದ ಸಹಜವಾಗಿ ದೊರಕಬಹುದಾದ ಪ್ರೀತಿ, ವಿಶ್ವಾಸ, ಗೌರವಗಳಿಗೆ ವಂಚಿತರಾಗಬಾರದು. ನೇರಲ ಹಣ್ಣು ನೋಡುವುದಕ್ಕೆ ಕಪ್ಪು, ಆದರೆ ತಿಂದರೆ ಬಹಳ ರುಚಿ. ಹೆಂಡತಿ ಕಪ್ಪಾದರೂ ಉನ್ನತ ಗುಣದಿಂದ, ಉದಾತ್ತ ಸ್ವಭಾವದಿಂದ, ಶ್ರಮಪೂರ್ಣ ಒಗೆತನದಿಂದ ನಿಕೃಷ್ಟಳಾಗಬೇಕೆಂದಿಲ್ಲ. ಹೆಣ್ಣಿನ ಹೊರರೂಪಿಗೆ ಮನ್ನಣೆ ಕೊಡುವುದಕ್ಕಿಂತ ಅವಳ ಅಂತಃಶಕ್ತಿಯನ್ನು ಗುರುತಿಸಿ ಗೌರವಿಸಲು ಕಲಿಯಬೇಕು.

ಮಹಾಭಾರತದ ದ್ರೌಪದಿ, ಈಜಿಪ್ಟಿನ ಕ್ಲಿಯೋಪಾತ್ರ ಕೃಷ್ಣಸುಂದರಿಯರಾದರೂ ಚರಿತ್ರಾರ್ಹರಾಗಿದ್ದಾರೆ. ಕೃಷ್ಣಸುಂದರಿಯರು ಶ್ವೇತಸುಂದರಿಯರಷ್ಟೇ ಆಕರ್ಷಕರಾಗಿರುತ್ತಾರೆ. ಗಂಡಸು ಅದನ್ನು ಗ್ರಹಿಸಬೇಕು ಅಷ್ಟೇ. ಕಪ್ಪನ್ನು ಸಮರ್ಥಿಸಿ ಸಾಕಷ್ಟು ಸಾಹಿತ್ಯ ಸೃಷ್ಟಿಯಾಗಿದೆ.

ಕಪ್ಪೆಂದು ಜನರನ್ನು ಎತ್ತಿ ಮಾತಾಡದಿರು
ಕಪ್ಪಾದ ಹಸುವ ಕರೆದರೆ – ಆ ಹಾಲು
ಒಪ್ಪೋದು ಶಿವನ ಪೂಜೆಗೆ

ಬಿಳಿಯ ಚರ್ಮದ ಜನರು ಕಪ್ಪು ಜನರನ್ನು ಹಗುರವಾಗಿ ಟೀಕಿಸಬಾರದು. ಅಂಥವರನ್ನು ಮಾರ್ಮಿಕವಾಗಿ ನಿಕೃಷ್ಟರಂತೆ ಕಾಣಬಾರದು. ಹಸು ಕಪ್ಪಾದರೇನು, ಅದರ ಹಾಲು ಶಿವಪೂಜೆಗೆ ಸಲ್ಲುತ್ತದೆ. ಕಪ್ಪು ಹಸು ದಾನಕ್ಕೆ ಶ್ರೇಷ್ಠ ಎಂದು ಹೇಳುವುದೂ ಉಂಟು. ಕಪ್ಪು ಜನರು ಇಹಪರ ಮೆಚ್ಚುವಂತೆ ಬದುಕು ಮಾಡಬಹುದು. ಉತ್ತಮ ಜೀವನಕ್ಕೆ ಉದಾತ್ತ ಸಾಧನೆಗೆ ಮೈಯ ಕಪ್ಪು ಬಣ್ಣ ಅಡ್ಡಿಯಾಗುವುದಿಲ್ಲ. ಹಾಗೆ ನೋಡಿದರೆ ಭಾರತೀಯರು ಕಲ್ಪಿಸಿಕೊಂಡಿರುವ ದೇವರೂ ಕೂಡ ಕಪ್ಪುವರ್ಣದವರೆಂಬುದನ್ನು ಮರೆಯಬಾರದು. ರಾಜಕೀಯ ಮುತ್ಸದ್ದಿ ರಾಮಮನೋಹರ ಲೋಹಿಯಾ ಅವರು ಕಪ್ಪು ವರ್ಣದ ಶ್ರೇಷ್ಠತೆಯನ್ನು ಕುರಿತು ಸ್ವಾರಸ್ಯಕರವಾದ ಲೇಖನವೊಂದನ್ನು ಬರೆದಿರುವುದನ್ನು ಜ್ಞಾಪಿಸಿಕೊಳ್ಳಬಹುದು.

ಕಾಳಿತಂದಿಹೆಯೆಂದು ಕಡುದುಃಖ ಪಡಬೇಡ
ಹಲಸಿನ ಹಣ್ಣು ಮೈ ಮುಳ್ಳು – ಆದರೆ
ಸವಿದು ನೋಡದರ ಬಹುರುಚಿ.

ಮನುಕುಲದಲ್ಲಿ ಸೌಂದರ್ಯಪ್ರಜ್ಞೆ ಕಾಣಿಸಿಕೊಂಡಾಗ, ಅದರಲ್ಲಿ ಮನುಷ್ಯನ ಮೈಬಣ್ಣವೂ ಪ್ರಮುಖ ಪಾತ್ರವಹಿಸಿತು. ಕಪ್ಪು ಕನಿಷ್ಠವಾಯಿತು; ಬಿಳುಪು ಶ್ರೇಷ್ಠವಾಯಿತು. ಕಪ್ಪು ಹೆಣ್ಣನ್ನು ಮದುವೆಯಾದವನು, ಅದಕ್ಕಾಗಿ ದುಃಖಪಡುತ್ತಿರುವಾಗ, ಅವನನ್ನು ಸಮಾಧಾನಪಡಿಸುವ ಪರಿ ಈ ಗೀತೆಯಲ್ಲಿದೆ. "ಕಾಳಿ" ಹೆಣ್ಣನ್ನು ಹಲಸಿನ ಹಣ್ಣಿಗೆ ಹೋಲಿಸಿದೆ. ಹಲಸಿನ ಹಣ್ಣಿನ ಮೈತುಂಬ ಮುಳ್ಳು; ನೋಡಲು ಮುಟ್ಟಲು ಒರಟು. ಆದರೆ ಅದರ ಹಣ್ಣು ಸವಿಯುವುದಕ್ಕೆ ಬಹಳ ರುಚಿ. ಕಪ್ಪುಹೆಣ್ಣಿನ ಮೈಬಣ್ಣಕ್ಕಿಂತ ಅವಳ ಗುಣ, ಕಾರ್ಯತತ್ಪರತೆ, ಸಂಸಾರ ನಿರ್ವಹಣೆಯನ್ನು ಪರಿಭಾವಿಸಬೇಕು, ಮೆಚ್ಚಬೇಕು. ಅಂಥವಳೊಡನೆ ಸುಖವಾಗಿ ಸಂಸಾರಮಾಡಬೇಕು.

ಗಂಡಹೆಂಡಿರ ಮನವೆರಡಾದರೆ
ತಪ್ಪದು ತಲೆದಂಡ ಮಲ್ಲಯ್ಯ
ಗಂಡ ಹೆಂಡಿರ ಮನವೊಂದಾದರೆ
ನಂದಾದೀಪವೋ ಮಲ್ಲಯ್ಯ

ಸಂಸಾರದಲ್ಲಿ ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು ಪರಸ್ಪರ ಅರ್ಥಮಾಡಿಕೊಂಡು ಬಾಳುವೆ ಮಾಡಬೇಕು. ಇಬ್ಬರ ಮನಸ್ಸೂ ಏಕವಾಗಿರಬೇಕು. ಇಲ್ಲದಿದ್ದರೆ ತೊಂದರೆ ತಪ್ಪಿದ್ದಲ್ಲ. ಮಿತಿಮೀರಿದರೆ ತಲೆದಂಡವನ್ನೂ ತೆರಬೇಕಾಗುತ್ತದೆ. ತಲೆದಂಡ ಎಂಬ ನುಡಿಗಟ್ಟನ್ನು ಕ್ರಾಂತಿಕಾರಿ ಬಸವಣ್ಣ ಮೊದಲು ಬಳಸಿದ. ಅನಂತರ ಹಲವರು ಅಭಿವ್ಯಕ್ತಿಯ ಆಯಕಟ್ಟಿನ ಸಂದರ್ಭದಲ್ಲಿ ತಲೆದಂಡ ನುಡಿಗಟ್ಟನ್ನು ಬಳಸಿದ್ದಾರೆ. ಗಂಡ ಹೆಂಡತಿಯ ಮನಸ್ಸು ಒಂದಾದರೆ ನಂದಾದೀಪದಂತೆ ಆನಂದದಾಯಕವಾಗುತ್ತದೆ. ಇಡೀ ಸಂಸಾರದ ಮೇಟಿಗಳಾದ ಗಂಡ ಹೆಂಡತಿ ನೆಟ್ಟಗಿದ್ದರೆ ಒಟ್ಟು ಸಂಸಾರ ನೆಟ್ಟಗಿರುತ್ತದೆ. ಅವರು ಕೆಟ್ಟರೆ ಅವರ ಸಂಸಾರವೂ ಕೆಡುತ್ತದೆ. ಈ ಪದ್ಯದ ಅಂತ್ಯಭಾಗ ಗೇಯಗುಣದಿಂದ ಕೂಡಿರುವುದನ್ನು ವಿಶೇಷವಾಗಿ ಪರಿಭಾವಿಸಬಹುದು.

ಗಂಡ ಹೆಂಡಿರ ಬಾಳು ಗಂಧ ತೀಡಿಧಂಗ
ಇದ್ದರೆ ಇರಬೇಕು – ಚಂದಾಗಿ
ಸುಖದಿಂದ ಸಂಸಾರ` ನಡಿಬೇಕ.

ಶ್ರೀಗಂಧ ಪಕ್ಕದಲ್ಲಿದ್ದರೇ ಸುವಾಸನೆ ಚೆಲ್ಲುತ್ತದೆ. ಅದನ್ನು ತೇಯ್ದರಂತೂ ಅದರ ಪರಿಮಳ ಅಧಿಕಗೊಂಡು ಸುತ್ತಲೂ ಮುತ್ತುತ್ತದೆ. ಸಮರಸಭಾವದಿಂದ ಕೂಡಿದ ಸತಿಪತಿಗಳ ಬಾಳುಕೂಡ ಶ್ರೀಗಂಧದ ಪರಿಮಳದತೆ ಆಹ್ಲಾದಕಾರಿಯಾಗಿರುತ್ತದೆ. ಸಂಸಾರ ಮಾಡಿದರೆ ಹಾಗೆ ಮಾಡಬೇಕು, ಹಾಗೆ ಸುಖವಾಗಿರಬೇಕು. ಗಂಡ ಹೆಂಡತಿ ಒಪ್ಪಿ

ಮಾಡುವ ಸಂಸಾರ ಶಿವನಿಗೂ ಪ್ರಿಯವಾಗುತ್ತದೆ. ಹದಗೆಟ್ಟ ರೀತಿಯಲ್ಲಿ ಸಂಸಾರ ಮಾಡಬಾರದು.

ಬೆಣ್ಣೆ ಬೆಂಕಿಗೆ ವೈರಿ ಸುಣ್ಣ ಕಣ್ಣಿಗೆ ವೈರಿ
ಜೀವಕ್ಕೆ ವೈರಿ ಹಗೆಯೋರು – ತಮ್ಮಯ್ಯ
ಚಿನ್ನಕ್ಕೆ ವೈರಿ ಕಳವೋರು

ಮನುಕುಲದ ಇತಿಹಾಸದಲ್ಲಿ ಕೆಲವರು ಅಜಾತ ಶತ್ರುವೆಂದು ಕರೆಸಿಕೊಂಡರೂ ಅವರೂ ಕೂಡ ಸಂಪೂರ್ಣವಾಗಿ ಶತ್ರುಹೀನರಾಗಿರಲಿಲ್ಲ. ಧರ್ಮರಾಯನಿಗೂ ಶತ್ರುಗಳಿದ್ದರು. ಮಹಾವೀರ ಗೌತಮಬುದ್ಧ, ಯೇಸುಕ್ರಿಸ್ತ. ಮಹಮದ್ ಪೈಗಂಬರ್, ಮಹಾತ್ಮ ಗಾಂಧೀಜಿ ಮೊದಲಾದವರಿಗೂ ಶತ್ರುಗಳಿದ್ದರು. ಪ್ರಕೃತಿಯಲ್ಲಿ ಜೀವೋತ್ಪತ್ತಿಯಾದಾಗಲೇ ಶತ್ರು ಉತ್ಪತ್ತಿಯೂ ಆಗಿದೆ. ಮನುಷ್ಯನಿಗೆ ಶತ್ರುಬಾಧೆ ಅಧಿಕವಾಗಿದೆ. ಹಾಗಾಗಿ ಬದುಕಿನಲ್ಲಿ ಎಷ್ಟು ಎಚ್ಚರದಿಂದಿದ್ದರೂ ಸಾಲದು.

ಮೃದುವಾದ ಬೆಣ್ಣೆಗೆ ಪ್ರಖರವಾದ ಬೆಂಕಿ ವೈರಿ. ಬೆಂಕಿ ಹತ್ತಿರಕ್ಕೆ ಬಂದರೆ ಬೆಣ್ಣೆಯ ಅಸ್ತಿತ್ವವೇ ನಾಶವಾಗುತ್ತದೆ. ಸುಣ್ಣಕ್ಕೂ ಕಣ್ಣಿಗೂ ವೈರತ್ವ. ಕಣ್ಣು ಸೂಕ್ಷ್ಮ. ಅದಕ್ಕೆ ಸುಣ್ಣ ಬಿದ್ದರೆ ಕಣ್ಣು ಹಾಳಾಗುತ್ತದೆ. ಮನುಷ್ಯಜೀವಕ್ಕೆ ಶತ್ರುಗಳು ಅಪಾಯ. ಚಿನ್ನಕ್ಕೆ ಕಳ್ಳರು ವೈರಿ. ಹಾವು ಮುಂಗುಸಿಗೆ, ನಾಯಿ ಬೆಕ್ಕಿಗೆ ವೈರಿಯಾದಂತೆ ಮನುಷ್ಯನಿಗೆ ಮನುಷ್ಯನೇ ಶತ್ರುವಾಗುತ್ತಾನೆ. ಹುತ್ತವಿದ್ದಕಡೆ ಹಾವಿರುವಂತೆ, ಚಿನ್ನವಿದ್ದಕಡೆ ಕಳ್ಳರಿರುತ್ತಾರೆ. ಹಾಗಾಗಿ ಮನುಷ್ಯ ಚಿನ್ನವನ್ನು ಸಂಪಾದಿಸಿ ಕೂಡಿಡಬಾರದು. ಅದರಿಂದಾಗಿ ಕಳ್ಳರನ್ನು ಬರಮಾಡಿಕೊಳ್ಳಬಾರದು. ಚಿನ್ನದ ಜೊತೆಗೆ ಪ್ರಾಣವನ್ನೂ ಕಳೆದುಕೊಳ್ಳಬೇಕಾಗಬಹುದು. ಸಿರಿವಂತಿಕೆಯ ಅಪಾಯದ ಕಡೆಗೆ ಈ ಕವಿತೆ ಗಮನಸೆಳೆಯುತ್ತದೆ.

ಕಾರುಣುವಿ ಮರುದಿನ ಅಣ್ಣ ಬೇಟೆಗೆ ಹೋದ
ಹೆಣ್ಣ ಚಿಗರಿಯ ಕೊಲಬ್ಯಾಡ – ಅಣ್ಣಯ್ಯ
ನನ್ನಸರಿ ಮಾಡಿ ಬಿಡು ಅದನ

ಪ್ರಾಣಿಗಳು ಬೇಟೆಯಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತವೆ. ಅವು ಬದುಕುವುದಕ್ಕೆ ಪ್ರಾಣಿಬೇಟೆ ಅನಿವಾರ್ಯ. ಮನುಷ್ಯ ಮೋಜಿಗಾಗಿ ಪ್ರಾಣಿಬೇಟೆಯಾಡುತ್ತಾನೆ. ಅದನ್ನು ಪ್ರೋತ್ಸಾಹಿಸುವುದು ತಪ್ಪು. ಮೂಲತಃ ಬೇಟೆಗಾರನಾದ ಮನುಷ್ಯ ವ್ಯವಸಾಯವನ್ನು ಕಂಡುಕೊಂಡ ಮೇಲೆ ಬೇಟೆಯುನ್ನು ನಿಲ್ಲಿಸಿದ ಅಥವಾ ಕಡಮೆ ಮಾಡಿದ. ಕಾರುಹುಣ್ಣಿಮೆಯ ಮರುದಿನ ಸಂಪ್ರದಾಯದಂತೆ ಬೇಟೆಗೆ ಹೊರಟ ಅಣ್ಣನಿಗೆ ತಂಗಿ ಹೀಗೆ ಹೇಳುತ್ತಾಳೆ: ಬೇಟೆಯ ಸಂದರ್ಭದಲ್ಲಿ ಹೆಣ್ಣು ಜಿಂಕೆ ಸಿಕ್ಕಿದರೆ ಕೊಲ್ಲಬೇಡ, ಅದನ್ನು ತಂಗಿಗೆ ಸಮಾನವೆಂದು ತಿಳಿದು ಬಿಟ್ಟುಬಿಡು. ಜನಪದರ ಪ್ರಾಣಿದಯೆಗೆ ಈ ಹಾಡು ಸಾಕ್ಷಿಯಾಗಿದೆ.

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಸರ್ವಬಳಗವು
ಸತ್ಯವಾಕ್ಯಕೆ ತಪ್ಪಿ ನಡಿದರೆ
ಮೆಚ್ಚನಾ ಪರಮಾತ್ಮನು

ಸಂಸಾರಸ್ಥ ಹೆಣ್ಣು ಗಂಡು ಸತ್ಯವಾದ ಮಾರ್ಗದಲ್ಲಿ ನಡೆಯಬೇಕು. ಅಸತ್ಯಪಥ ಯಾರಿಗೂ ಕ್ಷೇಮವಲ್ಲ. ಸುಖೀ ಸಂಸಾರಕ್ಕೆ ಸತ್ಯಾವಾಹನೆ ಸಂಜೀವಿನಿ. ಸುಪ್ರಸಿದ್ಧ ಗೋವಿನ ಹಾಡಿನ ಈ ಚರಣ ಜನಪದರಿಗೆ ಬಹಳ ಪ್ರಿಯವಾದ ನೀತಿ ಸಂಹಿತೆ.

ಮಡದಿ ಸತ್ತರೆ ರಾಯ ಏನೆಂದು ಅಳುತಾನೆ?
ಕಲ್ಲು ಕಾವೇರಿ ಕರೆಯಾಗೆ – ಏರಿಯ ಮ್ಯಾಲೆ
ಬಾ ರಾಣಿ ನನ್ನ ಸೊಪುನಾಕೆ

ಪ್ರೀತಿಪಾತ್ರಳಾದ ಹೆಂಡತಿ ನಿಧನಳಾದಾಗ ಗಂಡನಿಗೆ ಅತೀವ ದುಃಖವಾಗುತ್ತದೆ. ತಾವಿಬ್ಬರೂ ನಡೆದಾಡಿ ಸಂತೋಷಿಸುತ್ತಿದ್ದ ಕಾವೇರಿ ನದಿಯ ದಂಡೆಯಲ್ಲಿ ಕಾಲಕಳೆಯುತ್ತಿದ್ದುದನ್ನು ಅನುಭವಿಸಲು ಸ್ವಪ್ನದಲ್ಲಾದರೂ ಬಂದು ಮುಖ ತೋರಿಸಬೇಕೆಂದು ಗಂಡ ಕೇಳಿಕೊಳ್ಳುತ್ತಾನೆ. ಸ್ವಪ್ನದರ್ಶನದಿಂದಲಾದರೂ ದುಃಖಶಮನ ಮಾಡಿಕೊಳ್ಳಲು ಆ ದಗ್ಧಜೀವ ಬಯಸುತ್ತದೆ.

ಜೂಜಾಡಿ ಪಾಂಡವರು ರಾಜ್ಯವ ಸೋತರು
ಜೂಜಾಡಿ ನಳನು ಬಳಲಿದ – ತಮ್ಮಯ್ಯ
ಜೂಜಿಗೆ ಮನವ ಕೊಡದಿರು

ಜೂಜಾಡುವುದು ಪ್ರಾಚೀನ ಪದ್ಧತಿ. ಜೂಜಾಟದಿಂದ ಸರ್ವಸ್ವವನ್ನೂ ಕಳೆದುಕೊಂಡವರಿದ್ದಾರೆ. ಈಗಲೂ ಆ ಪಿಡುಗಿನಿಂದ ಬಳಲುವವರುಂಟು. ಯುಗಾದಿ ಹಬ್ಬದಂದು ಸಾಂಕೇತಿಕವಾಗಿ ಜೂಜಾಡುವುದು ನಿಷಿದ್ಧವಲ್ಲವೆಂದು ಭಾವಿಸಲಾಗಿದೆ. ಮೋಜಿಗಾಗಿ ಒಮ್ಮೆ ಜೂಜಾಡುವುದು ತಪ್ಪಲ್ಲ. ಆದರೆ ಅದನ್ನೇ ವ್ಯಸನವನ್ನಾಗಿ ಮಾಡಿಕೊಳ್ಳುವುದು ಮಹಾತಪ್ಪು.

ಮಹಾಭಾರತದಲ್ಲಿ ಪಾಂಡವರು ಜೂಜಾಡಿ ಸಮಸ್ತ ರಾಜ್ಯವನ್ನೂ ಹೆಂಡತಿಯನ್ನೂ ಸೋತು ಕಾಡುಪಾಲಾದರು. ನಳಮಹಾರಾಜ ಜೂಜಾಡಿ ಪಡಬಾರದ ಕಷ್ಟ ಅನುಭವಿಸಿದ. ಇಂಥ ಉದಾಹರಣೆಗಳನ್ನು ನೆನೆಸಿಕೊಂಡು ಜೂಜಾಟಕ್ಕೆ ಮನಸ್ಸು ಕೊಡಬಾರದೆಂದು ತಂಗಿಯೊಬ್ಬಳು ತನ್ನ ಅಣ್ಣನನ್ನು ಎಚ್ಚರಿಸಿದ್ದಾಳೆ. ಪೌರಾಣಿಕ ವಿಷಯಗಳನ್ನು ಜನಪದರು ತಮ್ಮ ಅಭಿವ್ಯಕ್ತಿಗೆ ಬಳಸಿಕೊಳ್ಳುವುದಕ್ಕೆ ಈ ಹಾಡು ಉದಾಹರಣೆಯಾಗಿದೆ.

ಹೆಣ್ಣೆಂದು ರಾವಣ ಮಣ್ಣು ಮುಕ್ಕದನಯ್ಯ
ಅನ್ನಿಗರ ಹೆಣ್ಣು ಬಯಸದೆ – ಅಣ್ಣಯ್ಯ
ನಿನ್ನ ಹೆಣ್ಣೊಡನೆ ಸುಖಿಯಾಗು.

ಹೊರಚಾಳಿ ಹೆಣ್ಣಿಗಾಗಲೀ ಗಂಡಿಗಾಗಲೀ ಶೋಭೆಯಲ್ಲ. ಅಪ್ರತಿಮ ಪರಾಕ್ರಮಿ, ಮಹಾಶಿವಭಕ್ತ, ಅಷ್ಟೈಶ್ವರ್ಯ ಭೂಪತಿ ರಾವಣನಿಗೆ ಸ್ತ್ರೀವ್ಯಾಮೋಹ ದೌರ್ಬಲ್ಯ. ಮಾವ ಮಾರೀಚ ಬುದ್ಧಿ ಹೇಳಿದರೂ ಸ್ವಂತ ವಿವೇಚನೆಯನ್ನು ಬಳಸದೆ ಜಗನ್ಮಾತೆ ಸೀತಾದೇವಿಯನ್ನು ಅಪಹರಿಸಿ ಹಲವು ಅನಾಹುತಗಳಿಗೆ ಕಾರಣನಾಗಿ ತಾನೂ ಅಂತ್ಯಗೊಂಡ. ಅಂಥವನ ಸ್ಥಿತಿಯೇ ಹಾಗಾದಮೇಲೆ, ಸಾಮಾನ್ಯರ ಗತಿಯೇನು? ಅನ್ಯಸ್ತ್ರೀಯನ್ನು ಬಯಸದೆ ಸ್ವಂತ ಹೆಂಡತಿಯೊಡನೆ ಸುಖಜೀವನ ನಡೆಸುವುದು ಲೇಸು. ಅಣ್ಣನಿಗೆ ತಂಗಿಯ ಕಿವಿಮಾತು ಇದು. ಎಲ್ಲಾ ಉತ್ತಮ ಸ್ತ್ರೀಯರ ಬಯಕೆಯೂ ಇದೇ.

ಕಾಚು ಕಾಡುಗಿ ಹೀನ ಊಚ ನಾಲಿಗೆ ಹೀನ
ಆಚಾರ ಹೀನ ಗರತಿಯ – ಮನೆ ಮುಂದೆ
ಮೀಸಿ ಬಂದಣ್ಣನ ನಗೆ ಹೀನ.

ಯಾವುದೇ ಸಂದರ್ಭದಲ್ಲಾಗಲೀ ಯಾರೇ ಆಗಲಿ ಅನ್ಯಸ್ತ್ರೀಯ ಮುಂದೆ ಮರ್ಯಾದೆ ಮೀರಿ ನಡೆದುಕೊಳ್ಳಬಾರದು. ಅದರಲ್ಲೂ ಗರತಿಯಲ್ಲದವಳ ಮುಂದೆ ಬಹಳ ಎಚ್ಚರಿಕೆಯಿಂದಿರಬೇಕು. ತುಟಿರಂಗೇರುವಂತೆ ತಾಂಬೂಲ ಸವಿದು, ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು, ಬಾಯಿದೆರೆದರೆ ತಡೆಯಿಲ್ಲದೆ ಮಾತಾಡುವ, ಆಚಾರವಿಲ್ಲದ ಮಹಿಳೆಯ ಮುಂದೆ, ಮೀಸೆ ಮೂಡಿದ ಪ್ರಾಯದ ಗಂಡು ನಗೆ ಬೀರಬಾರದು. ಹಾಗೆ ಮಾಡುವುದು ತಪ್ಪು. ಅದು ಅಸಭ್ಯವರ್ತನೆ. ಅದರಿಂದ ಇಬ್ಬರೂ ಕೆಡಲು ದಾರಿಯಾಗುತ್ತದೆ. ಆಚಾರಹೀನಳಾಗಲೀ ಆಚಾರಸಹಿತಳಾಗಲೀ ಅಂಥ ಪರಸ್ತ್ರೀಯ ಮುಂದೆ ಸುಸಂಸ್ಕೃತ ಯುವಕ ಅಸಭ್ಯವಾಗಿ ನಡೆದುಕೊಳ್ಳಬಾರದು. ಉಪಾಯವಾಗಿ ಅಣ್ಣನನ್ನು ತಿದ್ದುವ ತಂಗಿಯ ಈ ಮಾತು ಸಮಾಜಸ್ವಾಸ್ಥ್ಯಕ್ಕೆ ಪೂರಕವಾಗಿದೆ.

ಕಳ್ಳಡಕೆ ಇದ್ದಂಗೆ ಕಡದಡಕೆ ಬೇಡವ್ವೆ
ಮಡದಿ ಇದ್ದಂಗೆ ಮನೆಮನೆಯ – ತಿರುಗುವ
ಹುಡುಗನಿಗೇತಕೊ ಬಿಳಿ ಕುದುರೆ.

ಉತ್ತಮ ಕುಲದ ಲಕ್ಷಣವಾದ ಹುಡುಗಿಯನ್ನು ಮದುವೆಯಾಗಿದ್ದರೂ ವ್ಯಭಿಚಾರಕ್ಕೆ ತೊಡಗುವ ಯುವಕನ ವ್ಯರ್ಥಬದುಕನ್ನು ಈ ಗೀತೆ ಪ್ರತಿಪಾದಿಸುತ್ತದೆ. ಸಮರ್ಥನೆಗೆ ದಿನಬಳಕೆಯ ಪರಿಚಿತ ವಸ್ತುಗಳನ್ನು ಬಳಸಿದೆ. ಕಳಿತ ಅಡಕೆಯನ್ನು ಸುಂದರ ಮಡದಿಗೂ ಕಡದ ಅಡಕೆಯನ್ನು ಅನ್ಯಸ್ತ್ರೀಗೂ ಸಾಮ್ಯಸಾಮತಿಯಾಗಿ ಉಪಯೋಗಿಸಿದೆ. ಬಿಳಿಕುದುರೆ ಪಟ್ಟದ ಕುದುರೆಯಾಗುವ ಅದೃಷ್ಟ ಪಡೆದಿದೆ. ಆದರೆ ಅನರ್ಹನಿಗೆ ಅದರ ಬೆಲೆ ತಿಳಿಯುವುದಿಲ್ಲ. ಬಿಳಿಕುದುರೆಯನ್ನು, ಮದುವೆಯಾಗಿರುವ ಸುಂದರ ಸ್ತ್ರೀಗೆ ಪ್ರತಿಯಾಗಿ ಪ್ರಯೋಗಿಸಿದೆ. ಪ್ರಾಚೀನ ಕಾಲದಿಂದಲೂ ಹೊರಚಾಳಿ ಟೀಕೆಗೆ ಒಳಗಾದರೂ ಅದು ಸಮಾಜದಲ್ಲಿ ಸಜೀವವಾಗಿರುವುದು ದುರಂತ.

ಕಾಗೆಗೆ ಕಣ್ಣಿಟ್ಟ ಕರಿಯ ಹುಬ್ಬಿನ ಜಾಣ
ಮಾವಿನ ಹಣ್ಣ ಮನೆಯಾಗೆ – ಇಟುಕೊಂಡು
ಅತ್ತಿ ಹಣ್ಣಿಗ್ಯಾಕೆ ಮನಸಿಟ್ಟೆ?

ವಿಭಿನ್ನ ಉಪಮೆ ಉಪಮಾನದಿಂದ ಅಭಿವ್ಯಕ್ತವಾಗಿರುವ ಈ ಗೀತೆಯಲ್ಲೂ ವ್ಯಭಿಚಾರವನ್ನು ಟೀಕಿಸಿದೆ. ಮಾವು ಹೆಂಡತಿಯನ್ನೂ ಕಾಗೆ ಮತ್ತು ಅತ್ತಿಹಣ್ಣು ಸೂಳೆಯನ್ನೂ ಪ್ರತಿನಿಧಿಸಿವೆ. ಮಾವಿನ ಹಣ್ಣಿನಂತಹ ಆಕರ್ಷಕವಾದ ಹದವಾದ ಹೆಣ್ಣು ಹೆಂಡತಿ ಮನೆಯಲ್ಲಿದ್ದಾಳೆ. ಆದರೆ ಕರಿಯ ಹುಬ್ಬಿನ ಜಾಣ ಸುಂದರಳಾದ ಹೆಂಡತಿಯನ್ನು ಬಿಟ್ಟು ಕಾಗೆಯ ಸ್ವಭಾವದ ಕಪ್ಪು ಬಣ್ಣದ, ಹೊರಗೆ ತಳಕು ಒಳಗೆ ಹುಳುಕಾದ ಅತ್ತಿಹಣ್ಣಿನಂತಹ ಅನ್ಯಸ್ತ್ರೀಗೆ ಮನಸ್ಸಿಟ್ಟಿದ್ದಾನೆ. ಇದರಿಂದ ಕೈಹಿಡಿದ

ಹೆಂಡತಿಗೂ ಅನ್ಯಾಯ ಮಾಡಿದ್ದಾನೆ, ತನಗೂ ಅನ್ಯಾಯ ಮಾಡಿಕೊಂಡಿದ್ದಾನೆ. ಇಂಥದ್ದನ್ನು ಜನಪದ ಮನಸ್ಸು ಒಪ್ಪುವುದಿಲ್ಲ.

ಕರಿಯ ಕಂಬಳಿಯೇಕೋ ಬಿಳಿಯ ದಟ್ಟಿಯದೇಕೊ
ಎರವಿನ ಜೋಡು ನಿನಗೇಕೋ – ಅಣ್ಣಯ್ಯ
ಸರಿಹೊತ್ತಿಲೇಕೋ ನೆರೆಮನೆ ?

ಈ ಗೀತೆ ಕೂಡ ಚಂಚಲ ಮನಸ್ಸಿನ ಇಂದ್ರಿಯ ನಿಗ್ರಹವಿಲ್ಲದ ಹೊರಚಾಳಿಯ ಅಣ್ಣನನ್ನು ಎಚ್ಚರಿಸುವ ತಂಗಿಯ ನೀತಿಬೋಧೆಯಾಗಿದೆ. ದೊಡ್ಡ ಸ್ಥಿತಿ ತೋರಿಸಲು ಸಾಲದ ಜೋಡು ಮೆಟ್ಟಿ, ಹೊತ್ತಲ್ಲದ ಹೊತ್ತಿನಲ್ಲಿ ನೆರೆಮನೆಗೆ ಹೋಗುವ ಅಣ್ಣನ ಗುಣ ತಂಗಿಗೆ ಹಿಡಿಸುವುದಿಲ್ಲ. ಬೇರೆಯವರಿಗೆ, ಬೀದಿಯಲ್ಲಿ, ಗುರುತು ಸಿಗದಿರಲೆಂದು ಕರಿಯ ಕಂಬಳಿಹೊದ್ದಿದ್ದಾನೆ. ಇಂಥ ಸ್ಥಿತಿ ಧೀರ ಗಂಡಸಿಗೆ ತರವಲ್ಲ.

ಸೂಳೆಗೆ ಹೋದವನು ಏನಾದ ಎಂತಾದ
ಕಾಡು ನಾಯಾದ ಕಪಿಯಾದ – ಆ ಮುರುವ
ಸೂಳೆಯ ಕಾಲಿಗೆ ಕೆರವಾದ

ಸ್ವಂತ ಸಂಸಾರವನ್ನು ಅಲಕ್ಷಿಸಿ, ವ್ಯಭಿಚಾರಕ್ಕಿಳಿದವನ ಅಂತ್ಯ ಸ್ಥಿತಿಯನ್ನು ಪ್ರಸ್ತುತ ಗೀತೆ ಸಮರ್ಥವಾಗಿ ವರ್ಣಿಸುತ್ತದೆ. ಸೂಳೆಗಾರಿಕೆಗೆ ಬಲಿಯಾದ ಮೂರ್ಖ ಮನುಷ್ಯ ಕಾಡುನಾಯಿಯಂತೆ ಕಾಡುಕೋಡಗನಂತೆ ಅಲೆಯುತ್ತಾನೆ; ಕೊನೆಗೊಂದು ದಿನ ಎಲ್ಲವನ್ನು ಕಳೆದುಕೊಂಡು ನಿರ್ಗತಿಕನಾಗಿ ಸೂಳೆಯ ಕಾಲಿಗೆ ಎಕ್ಕಡವಾಗುತ್ತಾನೆ. ಇದು ಪರಿಣಾಮಕಾರಿಯಾದ ಶಬ್ದಚಿತ್ರವಾಗಿದೆ.

ಸೂಳೆಯೊಳ್ಳಿದಳೆಂದು ಕಾಜು ಸೀರೆಯ ಕೊಟ್ಟ
ಸಾಲಿಗ ಬಂದ ಎಳೆದಾಗ – ಅಣ್ಣಯ್ಯ
ದಮ್ಮಯ್ಯ ಎಂದು ಎನುತಿಪ್ಪ.

ಸೂಳೆಯನ್ನು ಸಂತೃಪ್ತಿಗೊಳಿಸುವುದಕ್ಕಾಗಿ ಸಾಲಮಾಡಿ ವಸ್ತ್ರ ಒಡವೆ ಕೊಟ್ಟ. ಸಾಲ ಕೊಟ್ಟವನು ಬಂದು ಹಣಕೇಳಿದಾಗ ದಮ್ಮಯ್ಯ ಎಂದು ಬೇಡಿಕೊಳ್ಳುವ ಸ್ಥಿತಿಗಿಳಿದ.

ಯಾಕೆ ಬಡಿದಾಡ್ತಿದ್ದೀ ಮಾಯ ಮುಚ್ಚೀ
ಸಂಸಾರ ನೆಚ್ಚೀ
ನೀನು ಹೋಗೋದರಿಯೆ ಕಣ್ಣುಮುಚ್ಚೀ.

ಹೆಂಡಿರು ಮಕ್ಕಳಿರುವರು ತಮ್ಮ ಎಲ್ಲಿ ತನಕ?
ಇದ್ದರೆ ತಿಂಬೋ ತನಕ
ನಾಳೆ ಸತ್ತರೆ ಬರುವರು ತಮ್ಮಾ ಕುಣಿತನಕ
ಮಣ್ಣು ಮುಚ್ಚೋ ತನಕ.

ಸರಳವಾದ ಈ ತತ್ವಪದ ಬದುಕಿನ ಅಶಾಶ್ವತೆಯನ್ನು ಕಣ್ಣಿಗೆ ಕಟ್ಟುವಂತೆ ತೋರಿಸುತ್ತದೆ. ಜೊತೆಗೆ ಲೌಕಿಕ ಸಂಬಂಧದ ತಾತ್ಕಾಲಿಕತೆಯನ್ನು, ಸಾವಿನ ಅನಿವಾರ್ಯತೆಯನ್ನು ಧ್ವನಿಸುತ್ತದೆ.

ಗುರು ವಸ್ತಾದಿ ತತ್ವ ಹೇಳುತೀನಿ
ಪಟಿಂಗ್ರ ಸೋಪತಿ ಮಾಡಬಾರದು
ಮಾಡಿದರೇಕೆ ಮಾಡವಲ್ಲೆ ಮತ್ತೆ ಒಂದು ಹೇಳತೀನಿ
ಹೊಟ್ಯಾಗಳ ಗುಣ ಒಬ್ಬರಿಗೆ ಹೇಳಬಾರದು
ಕೋಡಂಗ್ಯಾಗಬಾರದು.

ಶಿವಕೊಟ್ಟ ಕಾಲಕೆ ಧಾನ್ಯವ ಬೆಳೆದರೆ
ರಾತ್ರಿ ಹೊತ್ತು ರಾಶಿನಾದರು ಹಾಕಬಾರದು
ಹಾಕಿದರೇಕೆ ಹಾಕವೊಲ್ಲೆ ಮತ್ತೆ ಒಂದ ಹೇಳತೀನಿ
ದಾನಧರ್ಮದ ಕೈಯ ಮರೆಯಬಾರದು
ಮೂಢನಾಗಬಾರದು.

ಶಿವಕೊಟ್ಟ ಕಾಲಕೆ ಧನವಂತನಾದರೆ
ಎತ್ತಿನ ಜೊತೆಗೆ ಕೋಣನಾದರು ತರಬಾರದು
ತಂದರೇಕೆ ತರವೊಲ್ಲೆ ಮತ್ತೆ ಒಂದ ಹೇಳತೀನಿ
ಎತ್ತಿನ ಜೊತೆಗೆ ಕೋಣನಾದರು ಹೂಡಬಾರದು
ಮೂಢನಾಗಬಾರದು.

ಹಾದರವೆಂಬೋದು ಹಾಲ ಮೇಲಿನ ಕೆನೆ
ಹಗಲೆಲ್ಲ ಅವಳ ಮನೆಗೆ ಹೋಗಬಾರದು
ಹೋದರೇಕೆ ಹೋಗವೊಲ್ಲೆ ಮತ್ತೆ ಒಂದ ಹೇಳತೀನಿ
ಹಗಲೆಲ್ಲ ಅವಳ ಮೋರೆ ನೋಡಬಾರದು
ಹಲ್ಲು ಕಿಸಿಯಬಾರದು.

ತನ್ನ ಹೆಂಡತಿ ಪತಿವ್ರತೆಯಾದರು
ತವರು ಮನೇಲಾರು ತಿಂಗಳು ಬಿಡಬಾರದು
ಬಿಟ್ಟರೇಕೆ ಬಿಡವೊಲ್ಲೆ ಮತ್ತೆ ಒಂದ ಹೇಳತೀನಿ
ಹೆಂಡ್ತಿ ಮನೆಗ್ಹೋಗಿ ಬರೋದು ಬಿಡಬಾರದು
ಬ್ಯಾಡದೋನಾಗಬಾರದು.

ಜನಪದರ ಈ ತತ್ವಪದ ಸರಳವಾದ ಸಹಜವಾದ ಲೋಕನೀತಿಯನ್ನು ಹೇಳುತ್ತದೆ. ಸಭ್ಯನಾದವನು ಪೋಕರಿ ಘಟಿಂಗರ ಸಹವಾಸ ಮಾಡಬಾರದು. ಶಿವ ಅನುಗ್ರಹಿಸಿದರೆ ಭೂಮಿ ಬೆಳೆಯುತ್ತದೆ. ಬಿತ್ತಿದ ಬೆಳೆ ಕೈಹತ್ತುತ್ತದೆ. ಬೇಡುವವರು ಬರುವರೆಂದು ಊಹಿಸಿ ರಾತ್ರಿಯ ಹೊತ್ತು ರಾಶಿ ಒಕ್ಕುವ ಕೆಲಸಮಾಡಬಾರದು. ದಾನಧರ್ಮವನ್ನು ಮರೆಯಬಾರದು. ಕೃಷಿಕ ಕೊಡದಿದ್ದರೆ ಬಡಬಗ್ಗರು ಬದುಕುವುದು ಹೇಗೆ? ದಾನಧರ್ಮದ ಅಗತ್ಯವನ್ನು ಈ ಭಾಗ ಪ್ರತಿಪಾದಿಸುತ್ತದೆ.

ಕೃಷಿಕನ ಉಳಿಮೆಗೆ ದನಕರು ಬೇಕು. ಶಿವನ ದಯೆಯಿಂದ ಹಣವಂತನಾದರೆ ಎತ್ತು ಕೊಳ್ಳುವುದಕ್ಕೆ ಕಷ್ಟವಾಗಲಾರದು. ಆದರೆ

ಎತ್ತಿನ ಜೊತೆಗೆ ಕೋಣವನ್ನು ಕಟ್ಟಿ ಬೇಸಾಯಕ್ಕೆ ತೊಡಗಬಾರದು. ಎತ್ತಿನ ಸ್ವಭಾವ ಬೇರೆ; ಕೋಣದ ಸ್ವಭಾವ ಬೇರೆ. ಎರಡನ್ನೂ ಒಂದು ಮಾಡಲು ಪ್ರಯತ್ನಿಸಿದರೆ ದಡ್ಡನೆನಿಸಿಕೊಳ್ಳಬೇಕಾಗುತ್ತದೆ.

ಹಾದರ ಮಾಡಬಾರದು. ಹಗಲೆಲ್ಲಾ ಹಾದರಗಿತ್ತಿಯ ಬಳಿಗೆ ಹೋಗಬಾರದು; ಅವಳ ಹತ್ತಿರ ಇರಬಾರದು. ಹಾಲಿನ ಕೆನೆ ತೆಳು, ಸೂಕ್ಷ್ಮ. ಆದರೆ ಅದು ಹಾಲಿಗಿಂತ ಮುಖ್ಯವಲ್ಲ. ಸ್ವಲ್ಪ ಮುಟ್ಟಿದರೂ ಹಾಲಿನ ಕೆನೆ ಹರಿಯುತ್ತದೆ. ಹಾಲಿನಂತಹ ಸಂಸಾರದ ಮುಂದೆ ಹಾಲಿನ ಕೆನೆಯಂತಹ ಹಾದರ ದೊಡ್ಡದಲ್ಲ.

ಹೆಂಡತಿಯಾದವಳು ಗಂಡನ ಮನೆಯಲ್ಲಿ ಗಂಡನೊಡನೆ ಇರುವುದೇ ಯೋಗ್ಯ. ಅನಿವಾರ್ಯವಾಗಿ ಹೆಂಡತಿ ತೌರಿಗೆ ಹೋಗಬೇಕಾದರೂ ಅಲ್ಲೆ ಅವಳನ್ನು ದೀರ್ಘಕಾಲ ಬಿಡಬಾರದು. ಬಿಡಬೇಕಾದ ಪರಿಸ್ಥಿತಿ ಬಂದರೆ ಗಂಡನಾದವನು ಆಗಾಗ ಹೋಗಿ ಬಂದು ಮಾಡಬೇಕು; ಸಂಸಾರ ಕೆಡದಿರಲು, ಗಂಡ ಹೆಂಡತಿಯ ಸಂಬಂಧ ಅನ್ಯಭಾವನೆಗೆ ಅವಕಾಶವಾಗದಿರಲು ಇದು ಮುಖ್ಯ. ಸಂಸಾರದ ಗುಟ್ಟನ್ನು ಈ ಪದ್ಯಚರಣ ಹಾಸ್ಯ ಹೂರಣದೊಡನೆ ಅನಾವರಣಗೊಳಿಸುತ್ತದೆ.

ಕಾಡತೊಂಡೇ ಕಾಯಿ ಕಾಂಬೋರಿಗತಿ ಚೆಂದ
ಹಣ್ಣೊಳ್ಳೆದೆಂದು ಮಲದಿರು – ಮೊಡ್ಡೋರ
ಹೆಣ್ಣೊಳ್ಳೆದೆಂದು ತರದಿರು.

ಆರ್ಥಿಕ ಅಸಮಾನತೆಯ ಸಂಬಂಧ ಅಪಾಯಕಾರಿ ಎಂಬುದನ್ನು ಈ ಜನಪದ ಗೀತೆ ನಿರೂಪಿಸುತ್ತದೆ. ಸಂಬಂಧವನ್ನು ಬೆಳೆಸುವಾಗ ಉಹಳ ಎಚ್ಚರವಹಿಸಬೇಕು. ಇಲ್ಲದಿದ್ದರೆ ನಾನಾ ರೀತಿಯ ತೊಂದರೆಗಳಿಗೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ. ಕಾಡುತೊಂಡೆಕಾಯಿ ನೋಡುವುದಕ್ಕೆ

ಚೆಂದ. ಹಣ್ಣಾದರೆ ನೋಡಲು ಮತ್ತೂ ಚೆಂದ. ಆದರೆ ತಿನ್ನುವುದಕ್ಕೆ ಒಳ್ಳೆಯದಲ್ಲ. ದೂರದ ಬೆಟ್ಟ ನುಣ್ಣಗೆ ಎನ್ನುವ ತರಹ. ಹತ್ತಿರಕ್ಕೆ ಹೋದಾಗ ನಿಜಸ್ಥಿತಿ ಅರಿವಾಗುತ್ತದೆ. ದೊಡ್ಡವರ ಮನೆ, ಅವರ ಮನೆಯ ಹೆಣ್ಣು ನೋಡುವುದಕ್ಕೆ ಚೆಂದ. ಸಾಮಾನ್ಯ ಸ್ಥಿತಿಯವನು ಸಂಬಂಧ ಬೆಳೆಸಲು ಸಾಧ್ಯವಿಲ್ಲ. ಹಾಸಿಗೆ ಇದ್ದಷ್ಟು ಕಾಲುಚಾಚಬೇಕು; ಅನುಕೂಲ ಇದ್ದಷ್ಟು ಸಂಬಂಧ ಬೆಳೆಸಬೇಕು.

ಮಾಗೀನೆ ತಿರುಗ್ಯಾವು, ಮಳೆಗಾಲ ತಿರುಗ್ಯಾವು
ಹೋವ ಬ್ಯಾಸಿಗೆ ತಿರುಗ್ಯಾವು – ಕಂದಯ್ಯ
ಸಗ್ಗಕೆ ಹೋದವನು ತಿರುಗಾನು.

ಬ್ರಹ್ಮಾಂಡಲ್ಲಿ ಋತುಚಕ್ರ ನಿರಂತರವಾಗಿ ಸುತ್ತುತ್ತಿದೆ. ಇದ್ದದ್ದು ಹೋಗುತ್ತದೆ, ಹೋದದ್ದು ಮರಳಿ ಬರುತ್ತದೆ. ಚಳಿಗಾಲ, ಮಳೆಗಾಲ, ಬೇಸಿಗೆಕಾಲ ಋತು ಧರ್ಮದಂತೆ ಮತ್ತೆ ಮತ್ತೆ ಬರುತ್ತವೆ. ಅದು ಪ್ರಕೃತಿಗೆ ಮಾತ್ರ ಇರುವ ಅವಕಾಶ. ಆದರೆ, ಒಮ್ಮೆ ಸತ್ತವನು ಮತ್ತೆ ಎದ್ದು ಬರುವುದಿಲ್ಲ. ಇದು ಪ್ರಕೃತಿ ರಹಸ್ಯ; ಸಾವಿನ ರಹಸ್ಯ. ಸತ್ತವರ ಬಗೆಗಿನ ಈ ಹಾಡು ಮಾರ್ಮಿಕವಾಗಿದೆ. ಸಾರ್ವಕಾಲಿಕವಾಗಿದೆ. ಇದನ್ನು ಬದಲಾಯಿಸಲು ಯಾರಿಗೂ ಸಾಧ್ಯವಿಲ್ಲ.

ಗುರುಹಿರಿಯರ ಮಾತ ಮೀರಿ ನಡಿಬಾರದೊ
ಹಡದಪ್ಪ ಹಡದವ್ವ ಎದರ ನುಡಿಬಾರದೊ.
ಬಡತನ ಬಂದಾರ ನೆಂಟರ ಬಾಗಿಲ ಸೇರಬಾರದೊ
ಕರುಣ ಇಲ್ಲದವರಲ್ಲಿ ಶರಣನೆಂದು ಹೋಗಬಾರದೊ
ಸೇರಲಾರದವರ ಮನಿಗಿ ಊಟಕ ಹೋಗಬಾರದೊ
ವೈರಿ ಮುಂದ ಚಂದ್ರಬಲ ಎಂದಿಗಿ ಹೇಳಬಾರದೊ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ರೂಢಿಯಲ್ಲಿರುವ ಗೀಗೀ ಪದದ ಈ ಖ್ಯಾಲಿ ಹಾಡು ಸರಳವಾದ ಮಾತುಗಳಲ್ಲಿ ತಿಳಿವಳಿಕೆಯನ್ನು

ಬೋಧಿಸಿದೆ. ಗಂಡು ಹೆಣ್ಣು ಆದಿಯಾಗಿ ಪ್ರತಿಯೊಬ್ಬರಿಗೂ ಜನಪದರ ಈ ಲೋಕಾನುಭವ ಉಪಯೋಗಕ್ಕೆ ಬರುತ್ತದೆ.

ಜೀವನವೆಲ್ಲ ಬೇವು ಬೆಲ್ಲ ಬಲ್ಲವರೆಲ್ಲ ನಂಬಿದರಲ್ಲ
ಕಷ್ಟಸುಖ ಸಿಹಿಕಹಿ ಸಮವೆಲ್ಲ – ಬೆಟ್ಟದೊಡೆಯ
ಮಲ್ಲಯ್ಯನ ದಯವಿದ್ರೆ ಭಯವಿಲ್ಲ.

ಜೀವನವೆಂಬುದು ಸುಖದ ಸೋಪಾನವಲ್ಲ; ಹಾಗೆಂದು ಕಷ್ಟ ಕೋಟಲೆಯ ಹೊಂಡವೂ ಅಲ್ಲ. ಜೀವನ ಕಷ್ಟಸುಖ, ಸಿಹಿಕಹಿ, ಬೇವುಬೆಲ್ಲದ ಮಿಶ್ರಣ ಎಂಬುದು ಬಲ್ಲವರ ನಂಬಿಕೆ. ಬಂದಿದ್ದನ್ನೆಲ್ಲ ಸಮವಾಗಿ ಸ್ವೀಕರಿಸಬೇಕು; ಅನುಭವಿಸಬೇಕು; ಜೀರ್ಣಿಸಿಕೊಳ್ಳಬೇಕು. ಇದಕ್ಕೆ ದೈವದ ಅನುಗ್ರಹ ಬೇಕು, ಧಾರ್ಮಿಕ ಶ್ರದ್ಧೆ ಇರಬೇಕು. ದೇವರ ದಯೆಯಿದ್ದರೆ ಧೈರ್ಯವಾಗಿ ಬದುಕನ್ನು ಎದುರಿಸಬಹುದು. ಜನಪದರ ದೈವನಂಬಿಕೆ ಅಚಲವಾದದ್ದು.

ಕಷ್ಟಸುಖವು ದೇವರಲೀಲೆಯು
ಹುಟ್ಟಿದ ಮೇಲೇಕೆ ಮರುಗುವುದು?

ಮಾತೆಯ ಗರ್ಭದೊಳಿಂದ ಹೊರಬಂದ ಕಾಲಕ್ಕೆ
ಪ್ರೀತಿ ಕವಚವನಾರು ತೊಡಿಸಿದರು?
ಏತಕೇ ದುಃಖವು ಲೋಕನಾಥನು ಇರಲು
ಸೋತು ಸೊರಗದೆ ನೀನು ಸುಖಿಯಾಗಿರು.

ಬಡತನ ಕವಿದರೆ ಎಂಥವರ ಸಂಸಾರವಾದರೂ ತತ್ತರಿಸುತ್ತದೆ. ದುಃಖದಿಂದ ಸೊರಗಬಾರದು. ಜೀವನ ಪ್ರೀತಿಯನ್ನು ಕಳೆದುಕೊಳ್ಳಬಾರದು. ದೇವರ ಮೇಲೆ ಭಾರಹಾಕಿ, ಬಂದಿದ್ದನ್ನು ಎದುರಿಸಬೇಕು. ಬಡತನದ ಜೀವಕ್ಕೆ ಜನಪದರು ಕಂಡುಕೊಂಡ ಸಾಂತ್ವನ ಈ ಗೀತೆ.

ಭಾಗ್ಯಗಳಿದ್ದಾಗ ಬೇಗ ಬಾ ಕೂರೆಂದು
ಭಾಗ್ಯಗಳೆಲ್ಲ ಕೆಡುವಾಗ – ಬಡವನ
ಮೂಗರಾಗುತ್ತ ಕಳಿಸ್ಯಾರು.

ಬಡತನ ಸಿರಿತನ ಶಾಶ್ವತವಲ್ಲವೆಂದು ಲೋಕಬಲ್ಲದು. ಆದರೂ ಭಾಗ್ಯವಂತನಿಗೆ ತೋರುವ ಮನ್ನಣೆ ನಿರ್ಭಾಗ್ಯನಿಗೆ ಇರುವುದಿಲ್ಲ. ಗಂಟಿದ್ದರೆ ನಂಟು, ನೆಂಟರು. ಇಲ್ಲದಿದ್ದರೆ ಯಾರೂ ಇಲ್ಲ. ಸಂಪತ್ತಿದ್ದರೆ ತಾವಾಗಿ ಬಂದು ಮಾತಾಡಿಸುತ್ತಾರೆ; ಭಾಗ್ಯ ಕೆಟ್ಟರೆ ಕಂಡೂಕಾಣದಂತೆ ದೂರವಾಗುತ್ತದೆ. ಮಾತಾಡುವುದಕ್ಕೂ ಇಷ್ಟಪಡದೆ ಮೂಕರಂತೆ ನಡೆದುಕೊಳ್ಳುತ್ತಾರೆ. ಇಂಥ ಮಂದಿಯ ಬಗೆಗೆ ಎಚ್ಚರದಿಂದಿರಬೇಕು. ಬದುಕಿನಲ್ಲಿ ಆರ್ಥಿಕ ಅಧೋಗತಿ ಪ್ರಾಪ್ತವಾಗದಂತೆ ನೋಡಿಕೊಳ್ಳಬೇಕು.

ಮಾನವ ಜಲ್ಮಕೆ ಶೀಲವುಬೇಕು
ಶಿವನೊಲುಮೆಗೆ ಇದನ್ನು ಸಾಧಿಸಬೇಕು ॥ಪಲ್ಲವಿ॥

ಇದುವೆ ಮಾನವ ಗಳಿಸುವ ಸೊತ್ತು
ರುಚಿಶುಚಿಗಾಗಿದೆ ಇದು ಸಂಪತ್ತು
ಶುದ್ಧಿಗೆ ವೃದ್ಧಿಗೆ ಭಾಗ್ಯೋದಯಕ್ಕೆ
ಸತ್ಯಕೆ ಶ್ರೇಯಕೆ ಇದುವೇಬೇಕು.

ಈ ಭಜನೆ ಪದದಲ್ಲಿ ಬದುಕಿಗೆ ಅಗತ್ಯವಾಗಿರುವ ಶೀಲಶುಚಿತ್ವಕ್ಕೆ ಕರೆನೀಡಿದೆ.

ಹಾಲು ಇದ್ದರ ಹಬ್ಬ ತಾಯಿ ಇದ್ದರ ಮಕ್ಕಳು
ಗಂಗಿ ಇದ್ದರ ಬಾವಿ ಲಿಂಗವಿದ್ದರ ಗುಡಿ
ಜ್ಯೋತಿ ಇದ್ದರ ಮನಿ ರೀತಿ ಇದ್ದರ ನಾರಿ
ಬೀರಪ್ಪ ದೇವರಿದ್ದರ ಕೈಲಾಸವು.

ಜನಪದರು ಸಹಜವಾಗಿ ಬಯಸುವ ಸಾಮಾಜಿಕ, ಸಾಂಸಾರಿಕ, ಸಾಂಸ್ಕೃತಿಕ ಅಂಶಗಳು ಇಲ್ಲಿ ಹೇಳಿಕೆಯಾಗಿವೆ. ಇವೆಲ್ಲಕ್ಕೂ ಆಧಾರ

ದೈವಾನುಗ್ರಹ. ಒಂದು ಇದ್ದರೆ ಇನ್ನೊಂದಕ್ಕೆ ಬೆಲೆ. ಪ್ರತಿಯೊಂದೂ ಪರಸ್ಪರ ಪೂರಕ.

ಉದ್ದಾಗಿದ್ದರೇನು ಬುದ್ಧಿ ಸಾಲದ್ಮೇಲೆ
ಮದ್ದೂರ ಕೆರೆಯ ಮದಗದ – ಏರಿ ಮ್ಯಾಲೆ
ಗೊಬ್ಳಿ ಪಲ್ಲೇಸಿ ಫಲವೇನು?

ಕೇವಲ ದೈಹಿಕ ಆಕಾರದಿಂದ ಮನುಷ್ಯನ ವ್ಯಕ್ತಿತ್ವಕ್ಕೆ ಬೆಲೆ ಬರುವುದಿಲ್ಲ. ಅದಕ್ಕೆ ತಕ್ಕಂತೆ ಬುದ್ಧಿಯೂ ಇರಬೇಕು. ವಿಶಾಲವಾದ, ಆಳವಾದ ಕೆರೆಯ ಏರಿಯ ಮೇಲೆ ನೆರಳು ನೀಡುವ ಮರಗಳೋ ಫಲಭರಿತ ಮರಗಳೋ ಇದ್ದರೆ ಉಪಯೋಗ. ಅದಕ್ಕೆ ಬದಲಾಗಿ ಗೊಬ್ಬಳಿ ಮರವಿದ್ದರೆ ಪ್ರಯೋಜನವಿಲ್ಲ. ಗೊಬ್ಬಳಿಯ ಮರದಿಂದ ನೆರಳಿನ ತಂಪು ದೊರಕುವುದಿಲ್ಲ. ಅಡಿಯಲ್ಲಿ ಮುಳ್ಳು ಉದುರುವುದರಿಂದ ಅಲ್ಲಿ ಕುಳಿತುಕೊಳ್ಳಲು ಆಗುವುದಿಲ್ಲ. ಹಣ್ಣು ಹಂಪಲು ಅದರಿಂದ ಸಿಗುವುದಿಲ್ಲ. ಬುದ್ಧಿಯಿಲ್ಲದವನನ್ನು ಜಾಲಿಮರಕ್ಕೆ ಹೋಲಿಸಿರುವುದು ಯಥಾರ್ಥವಾಗಿದೆ. ಬುದ್ಧಿಹೀನನ ಬದುಕು ವ್ಯರ್ಥ.

ಉತ್ತಮರ ಗೆಳೆತನ ಪುತ್ಥಳಿ ಬಂಗಾರ
ಮತ್ತೆ ಹೀನರ ಗೆಳೆತನ – ಮಾಡಿದರ
ಹಿತ್ತಾಳಿಗಿಂತ ಬಲುಹೀನ.

ಮನುಷ್ಯ ಸಂಘಜೀವಿ; ಸ್ನೇಹ ಜೀವಿಯೂ ಹೌದು. ಬದುಕಿನಲ್ಲಿ ಸ್ನೇಹಿತರ ಅಗತ್ಯವಿರುತ್ತದೆ. ಆದರೆ ಸ್ನೇಹಿತರನ್ನು ಆರಿಸಿಕೊಳ್ಳುವಾಗ ಎಚ್ಚರಿಕೆಯಿರಬೇಕು. ಉತ್ತಮರ ಗೆಳೆತನ ಮಾಡಬೇಕು. ಹಾಗೆ ಮಾಡಿದರೆ ಬಂಗಾರದ ಗೊಂಬೆಯೊಡನೆ ಸ್ನೇಹಮಾಡಿದಷ್ಟು ಬೆಲೆಬಾಳಿದ್ದಾಗುತ್ತದೆ. ಕೆಟ್ಟವರ ಸ್ನೇಹ ಮಾಡಿದರೆ ಹಿತ್ತಾಳೆಗಿಂತ ಹೀನವಾಗುತ್ತದೆ. ಲೋಹಗಳನ್ನು ಸ್ನೇಹಕ್ಕೆ ಉಪಮಾನಗಳಾಗಿ ಬಳಸಿದೆ.

ಸೆಗಣಿ ಜೊತೆಯಲ್ಲಿ ಸ್ನೇಹಕ್ಕಿಂತ ಗಂಧದೊಡನೆ ಗುದ್ದಾಟ ಲೇಸೆಂಬ ಗಾದೆಯಿದೆ. ಸಹವಾಸ ಕೆಟ್ಟರೆ ಸರ್ವವೂ ಕೆಡುತ್ತದೆ. ಗಂಡಾಗಲೀ ಹೆಣ್ಣಾಗಲೀ ಉತ್ತಮರ ಸ್ನೇಹವನ್ನು ಮಾಡಬೇಕು. ಸಹವಾಸ ದೋಷ ಸರ್ವಸ್ವನಾಶ ಎಂಬಂತಾಗಬಾರದು.

ಬಂಗಾರ ಬಳಿಯಿದ್ರೆ ಬೈಬ್ಯಾಡ ಬಡವರಿಗೆ
ಬಂಗಾರ ನಿನಗ ಸ್ಥಿರವಲ್ಲ – ಮಧ್ಯಾಹ್ನದ
ಬಿಸಿಲು ಹೊಳ್ಳುವದು ತಡವಲ್ಲ.

ಧನಮದ ಅಪಾಯಕಾರಿ. ಸಿರಿಸಂಪತ್ತು ತುಂಬಿಬಂದರೆ ಬಡವರ ಬಗೆಗೆ ತಿರಸ್ಕಾರ. ಆದರೆ ಅಂತಹ ಅಮಾನವೀಯ ಮನೋಧರ್ಮವನ್ನು ಬೆಳೆಸಿಕೊಳ್ಳಬಾರದು. ಯಾಕೆಂದರೆ ಸಿರಿವಂತಿಕೆ ಸ್ಥಿರವಲ್ಲ. ಮಧ್ಯಾಹ್ನದ ಬಿಸಲು ಪ್ರಖರವಾಗಿದ್ದರೂ ಅದು ಬಹಳ ಹೊತ್ತು ಇರಲಾರದು. ಇದ್ದಕ್ಕಿದ್ದಂತೆ ಅದು ಹೊರಳುತ್ತದೆ. ಹಾಗೆಯೇ ಚಂಚಲ ಸ್ವಭಾವದ ಸಂಪತ್ತು ಒಂದೇ ಕಡೆ, ಒಬ್ಬನ ಬಳಿಯಲ್ಲೇ ಸ್ಥಿರವಾಗಿ ಇರುವುದಿಲ್ಲ. ಸಿರಿತನ ಬಡತನ ಕಾಲಧರ್ಮಕ್ಕನುಗುಣವಾಗಿ ಬದಲಾಗುತ್ತಿರುತ್ತದೆ. ಬಂಗಾರವನ್ನು ಮಧ್ಯಾಹ್ನದ ಬಿಸಿಲಿಗೆ ಹೋಲಿಸಿರುವುದು ಅರ್ಥಗರ್ಭಿತವಾಗಿದೆ. ಸಿರಿವಂತಿಕೆಯ ಬಗೆಗೆ ವ್ಯಂಗ್ಯವೂ ಬಡತನದ ಬಗೆಗೆ ಅನುಕಂಪೆಯೂ ಕಾವ್ಯಾತ್ಮಕವಾಗಿ ಮೂಡಿದೆ. ಗಂಡಾಗಲೀ ಹೆಣ್ಣಾಗಲೀ ಸಿರಿತನ ಬಂದಾಗ ಮನುಷ್ಯತ್ವವನ್ನು ಕಳೆದುಕೊಳ್ಳಬಾರದು.

ಅಡವಿ ಸೇರಲು ಬೇಡ ಜಡೆಯ ಬೆಳೆಸಲು ಬೇಡ
ಮಡದಿಯ ನೀನು ಬಿಡಬ್ಯಾಡ – ದೃಢದಿಂದ
ನಡೆನುಡಿಯಲ್ಲಿ ಕೆಡಬ್ಯಾಡ.

ಸಂಸಾರಿಯಾದ ಮೇಲೆ ಕಷ್ಟವೋ ಸುಖವೋ ಹೆಣಗಬೇಕು. ಸುಖವಿದ್ದರೆ ಮಾತ್ರ ಸಂಸಾರಬೇಕು; ಕಷ್ಟಬಂದರೆ ಸಂಸಾರ ಬೇಡವೆನ್ನುವುದು

ಸರಿಯಲ್ಲ. ಮದುವೆಯಾಗುವಾಗ ಮಡದಿಯ ಬಗೆಗಿದ್ದ ಪ್ರೀತಿ, ಜವಾಬ್ದಾರಿ, ಬಾಳಿನ ಕೊನೆಯವರೆಗೂ ಇರಬೇಕು. ಕ್ಷುಲ್ಲಕ ಕಾರಣಕ್ಕೆ ಹೆಂಡತಿಯನ್ನು ತ್ಯಜಿಸಿ, ಸಂಸಾರವನ್ನೂ ತಿರಸ್ಕರಿಸಿ, ವೈರಾಗಿಯಾಗಿ ಕಾಡುಸೇರಿ ಸನ್ಯಾಸಿಯಾಗಬಾರದು. ನಂಬಿದವರನ್ನು ಅನಾಥರನ್ನಾಗಿ ಮಾಡಬಾರದು. ನಡೆನುಡಿಯಲ್ಲಿ ದೃಢತೆಯಿದ್ದರೆ ಸಂಸಾರದಲ್ಲಿ ಸಾರ್ಥಕತೆ ಪಡೆಯುವುದು ಕಷ್ಟವಾಗುವುದಿಲ್ಲ. ಸಂಸಾರದ ಹೊಣೆಗಾರಿಕೆಯಿಂದ ಪಲಾಯನ ಮಾಡುವುದು ಗೃಹಸ್ಥಧರ್ಮವಲ್ಲ.

ಮೂರು ದಿನದ ಸಂತಿ ಮುನ್ನೋಡಿ ಮಾಡಿಕೋ
ಗರದಿ ನಡೆಯೂದು ಮಧ್ಯಾಹ್ನ ಮ್ಯಾಲ
ಸಂಜಿ ಆಧಾಂಗ ಒಂದು ಗುಂಜಿ ಉಳಿಯಾಕಿಲ್ಲ
ಖಾಲೀ ಮಾರಿ ಆದಾವೋ ಚೀಲಾ.

ಬದುಕನ್ನು ಸಂತೆಗೆ ಹೋಲಿಸಿರುವ ಸಂಕೀರ್ಣ ಶಬ್ದಚಿತ್ರ ಇಲ್ಲಿದೆ. ಒಂದು ದಿನದಲ್ಲಿ ಮೂರು ಅವಧಿಗಳು ಸ್ಪಷ್ಟವಾಗಿ ಕಾಣುತ್ತವೆ. ಅವು : ಬೆಳಿಗ್ಗೆ, ಮಧ್ಯಾಹ್ನ, ಸಂಜೆ. ಬದುಕಿನಲ್ಲೂ ಮೂರು ಅವಧಿಗಳು ಸ್ಪಷ್ಟವಾಗಿ ಕಾಣುತ್ತವೆ. ಅವು : ಬಾಲ್ಯ, ಯೌವನ, ಮುಪ್ಪು. ಬೆಳಗ್ಗೆ ಸಂತೆಕೂಡುತ್ತದೆ; ಮಧ್ಯಾಹ್ನದ ಮೇಲೆ ವ್ಯಾಪಾರ ನಡೆಯುತ್ತದೆ; ಸಂಜೆ ಸಂತೆ ಖಾಲಿಯಾಗುತ್ತದೆ. ಮನುಷ್ಯನ ಜೀವನದಲ್ಲಿ ಬಾಲ್ಯ, ಮುಪ್ಪು ಪರಾಧೀನ. ಪ್ರಾಯ ವ್ಯವಹಾರದ ಅಧೀನ, ಪ್ರಾಯದಲ್ಲಿ ವ್ಯವಹಾರದ ಭರಾಟೆ ಇದ್ದರೂ ಮುಪ್ಪಿನಲ್ಲಿ ಎಲ್ಲವೂ ಖಾಲಿಯೆನಿಸುತ್ತದೆ. ನಿರ್ದಿಷ್ಟ ಅವಧಿಯ, ತಾತ್ಕಾಲಿಕ ಬದುಕನ್ನು ಎಚ್ಚರಿಕೆಯಿಂದ ಸದುಪಯೋಗ ಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಜಗತ್ತೇ ಒಂದು ಸಂತೆ; ಬದುಕೂ ಅಷ್ಟೇ. ಸಂತೆಯ ವ್ಯಾಪಾರದಂತೆ, ಬದುಕಿನ ವ್ಯಾಪಾರವೂ ಲಾಭದಾಯಕವಾಗಬೇಕು. ಅದಕ್ಕೆ ಮುಂದಾಲೋಚನೆಬೇಕು.

ಮಂದಿ ಮಕ್ಕಳೊಳಗೆ ಚೆಂದಾಗೊಂದಿರಬೇಕ

ಗಂಧ ಸವೆದ್ಹಂಗ ಸವೆಬೇಕ – ಹೋಗಾಗ
ಮಂದಿ ಬಾಯಾಗ ಇರಬೇಕ.

ಹುಟ್ಟಿದ ಮೇಲೆ ಹೇಗೆ ಬದುಕಬೇಕು? ಸಾರ್ಥಕ ಜೀವನ ಯಾವುದು? ಹೇಗಿದ್ದರೆ ಜನರ ಪ್ರೀತಿಗೆ ಪಾತ್ರರಾಗಬಹುದು? ಎಂಬ ಪ್ರಶ್ನೆಗಳಿಗೆ ಈ ತ್ರಿಪದಿ ಉತ್ತರ ನೀಡುತ್ತದೆ. ಮನೆಯ ಮಂದಿ, ಮನೆಯ ಮಕ್ಕಳೊಡನಾಗಲೀ ಹೊರಗಿನವರೊಂದಿಗಾಗಲೀ ಚೆಂದಾಗಿರಬೇಕು; ಆತ್ಮೀಯವಾಗಿರಬೇಕು. ನಾಲ್ಕು ಜನರಿಗೆ ಉಪಕಾರಿಯಾಗಿ, ಬದುಕನ್ನು ಗಂಧದಂತೆ ಸವೆಯಿಸಬೇಕು. ಹಾಗೆ ಬಾಳುವೆ ಮಾಡಿದರೆ, ಅಂತ್ಯಕಾಲದಲ್ಲಿ ಜನರು ಕೊಂಡಾಡುತ್ತಾರೆ; ಮಾಡಿದ ಸೇವೆಯನ್ನು ನೆನೆಯುತ್ತಾರೆ.

ಸತ್ತಾಗ ನಾಲ್ಕು ಜನ ಕಣ್ಣೀರಿಟ್ಟರೆ, ಗುಣಗಾನ ಮಾಡಿದರೆ ಅದೇ ಸಾರ್ಥಕ ಬದುಕು. ಶರಣನ ಗುಣವನ್ನು ಮರಣದಲ್ಲಿ ನೋಡು ಎಂಬ ಮಾತು ಇಂತಹ ಹಿನ್ನೆಲೆಯಲ್ಲೇ ಹುಟ್ಟಿರುವಂತಿದೆ. ಉದಾತ್ತ ರೀತಿಯಲ್ಲಿ ಬದುಕು ಮಾಡದಿದ್ದರೆ ಹುಟ್ಟಿದ್ದು ವ್ಯರ್ಥವಾಗುತ್ತದೆ.

ಲೋಕದಾಗಿರುತನಕ ಬೇಕಾಗಿ ಇರಬೇಕ
ಸಾಕಾಗಿ ಶಿವನ ಸದರಿಗೆ – ಹೋಗುವಾಗ
ಎಲ್ಲಾರು ಬರತಾರ ಕಳಿಸಾಕ.

ಪರೋಪಕಾರಿಯ ಬದುಕಿಗೆ ಇರುವಾಗಲೂ ಬೆಲೆಯಿರುತ್ತದೆ; ಸತ್ತಾಗಲೂ ಬೆಲೆಯಿರುತ್ತದೆ. ಅಂಥವನು ಶಿವನ ಸಾನಿಧ್ಯಕ್ಕೂ ಪಾತ್ರನಾಗುತ್ತಾನೆ. ಲೋಕದವರ ಪ್ರೀತಿಗೂ ಪಾತ್ರನಾಗುತ್ತಾನೆ.

ಸಾಯುಹೊತ್ತಿಗೆ ಯಾವ ದೇವರಿಲ್ಲ
ಏನು ಮಾಡತಾನ ಗುಡಿಯನ ಕಲ್ಲ
ಕೊರಳಿಗೆ ಕೊರಳಬಿದ್ದು ಅಳತಾವಲ್ಲ

ಅಲ್ಲಾನ ಹೊರತು ಬಿಗಿ ಹರಿಯುವುದಿಲ್ಲ
ನಿನ್ನ ಹೊರತು ದೇವರೇ ಇಲ್ಲ
ಸೋಽಹಂ ಶಿವನೇ.

ಸಾವು ಬಂದಾಗ ಯಾರೂ ತಡೆಯುವುದಿಲ್ಲ ಯಾರೂ ಕಾಯುವುದಿಲ್ಲ. ಕಲ್ಲುದೇವರೂ ಅಸಹಾಯಕ. ಕೊರಳುತಬ್ಬಿ ಅಳಬಹುದು ಅಷ್ಟೇ. ಅತ್ತರೂ ಪ್ರಯೋಜನವಿಲ್ಲ. ಇಂಥ ಸಂದರ್ಭದಲ್ಲಿ ದೇವರೇ ಗತಿಯೆನ್ನಲು ವಿಧಿಯಿಲ್ಲ. ಅರ್ಥಗರ್ಭಿತ ಲಾವಣಿ ಸಾಲುಗಳಿವು.

ಸಂಸಾರ ಎಂಬ ಸಾಗರದೊಳಗೆ
ಹಡಗ ದಾಟುದು ಭಾಳ ಜಡಾ
ದಾಡಿ ಹೋದಮೇಲೆ ಏಟೇಟು ತ್ರಾಸ ಇಲ್ಲ
ಮುಂದೆ ಕಾಣುವುದು ಮುಕ್ತಿಮಠ.

ಅಳಿವದು. ಕಾಯ ಉಳಿವದು ಕೀರ್ತಿ
ಅದೊಂದು ಬರುವುದು ನಿಮಗೂಡ
ಜೀವಾತ್ಮ ಇರುವಾಗ ದಾನಧರ್ಮ ಮಾಡಿ
ಪುಣ್ಯವು ಗಳಿಸಿರಿ ನೀವು ಗಡ.

ಜೀವಾತ್ಮನ ಒಯ್ಯುವಾಗ ಜವಾನ ಬರುವಾಗ
ನೀನು ತಿಳಿದುಕೊಳ್ಳದ ಭಾಳಜಡ
ಪುಣ್ಯವೆಂಬುದು ಕಟ್ಟಿಟ್ಟಬುತ್ತಿ
ನಾಳೆ ಬರುವುದು ನಿಮ್ಮಗುಡ

ಗಳಿಸಿಟ್ಟ ಹೊಲಮನಿ ಆಸ್ತಿಪಾಸ್ತಿಯೆಲ್ಲ
ಬಿಟ್ಟು ಹೋಗ್ತಿದಿ ತಿಳಿಮೂಢ.

ಈ ಡೊಳ್ಳಿನ ಪದ ಸಾರ್ಥಕ ಜೀವನದ ರೀತಿಯನ್ನು ಸಂಸಾರದ ಮೂಲಕವೇ ಮುಕ್ತಿಗೊಳಿಸುವ ಮಾರ್ಗವನ್ನು ಸಾರುತ್ತದೆ. ಜೀವನದಲ್ಲಿ

ಪುಣ್ಯಗಳಿಕೆ ಮುಖ್ಯ; ಗಳಿಸಿದ ಸಂಪತ್ತಿನ ಸದುಪಯೋಗವೂ ಅಷ್ಟೇ ಮುಖ್ಯ. ಸತ್ತಮನುಷ್ಯನನ್ನು ಹಿಂಬಾಲಿಸುವುದು ಅವನು ಗಳಿಸಿದ ಪುಣ್ಯವೇ ಹೊರತು, ಗಳಿಸಿದ ಆಸ್ತಿಪಾಸ್ತಿಯಲ್ಲ.

ಕನ್ನಡ ಜನಪದ ಗೀತೆಗಳಲ್ಲಿ, ಹಿರಿಯರಿಂದ ಕಿರಿಯರಿಗೆ, ಕಿರಿಯರಿಂದ ಹಿರಿಯರಿಗೆ, ಸಮವಯಸ್ಕರಿಂದ ಸಮವಯಸ್ಕರಿಗೆ ನೀತಿಬೋಧೆಯಾಗಿರುವುದು ಕಂಡುಬರುತ್ತದೆ. ಇದರಲ್ಲಿ ಸ್ತ್ರೀಯರೂ ಪುರುಷರೂ ಸಮಸಮ ಪಾತ್ರಧಾರಿಗಳಾಗಿದ್ದಾರೆ. ಸಮಯ ಸಂದರ್ಭ ಬಂದರೆ ಎಲ್ಲರೂ ನೀತಿ ಹೇಳುಗರೂ ನೀತಿ ಕೇಳುಗರೂ ಆಗುವುದು ಜನಪದ ಸಂಸ್ಕೃತಿಯ ಲಕ್ಷಣವಾಗಿದೆ. ಸಮಸ್ತ ಜನಸಮುದಾಯದ ಆಸ್ತಿಯಂತೆ ಬಳುವಳಿಯಾಗಿ ಬಂದಿರುವ ನೀತಿಯ ಅರಿವನ್ನು ಎಲ್ಲರೂ ಪ್ರಯೋಗಿಸುತ್ತಾರೆ, ಎಲ್ಲರೂ ಪ್ರಯೋಗಿಸಿಕೊಳ್ಳುತ್ತಾರೆ.

ಜನಪದ ನೀತಿ ಪ್ರಧಾನವಾಗಿ ಸಮಷ್ಟಿಪ್ರಜ್ಞೆಯಿಂದ ಕೂಡಿದೆ; ಅಷ್ಟಿಷ್ಟು ವ್ಯಷ್ಟಿಪ್ರಜ್ಞೆಗೆ ಸಂಬಂಧಿಸಿದ್ದೂ ಉಂಟು. ಒಟ್ಟಾರೆ ಎಲ್ಲರೂ ಎಲ್ಲರನ್ನೂ ಅರಿಯಬೇಕು, ಎಲ್ಲರೂ ಎಲ್ಲರಿಗೂ ಆಗಬೇಕು, ಎಲ್ಲರೂ ನೆಮ್ಮದಿಯಿಂದ ಬಾಳಬೇಕು ಎಂಬುದು ಅದರ ಉದ್ದೇಶ.

ಜನಪದ ನೀತಿಯಲ್ಲಿ ಸ್ಪಷ್ಟನೀತಿ, ಪರ್ಯಾಯ ನೀತಿಯೆಂಬ ಪ್ರಧಾನ ಗುಂಪುಗಳನ್ನು ಕಾಣಬಹುದು. ಅಧ್ಯಯನ ದೃಷ್ಟಿಯಿಂದ ಬೇರೆ ರೀತಿಯಲ್ಲಿ ವಿಭಜಿಸಿಕೊಳ್ಳಲೂ ಸಾಧ್ಯವಿದೆ.

ಕನ್ನಡ ಜನಪದ ಗೀತೆಗಳಲ್ಲಿ ಸ್ತ್ರೀಯರು ಸ್ತ್ರೀಯರಿಗೆ, ಸ್ತ್ರೀಯರು ಪುರುಷರಿಗೆ, ಪುರುಷರು ಸ್ತ್ರೀಯರಿಗೆ, ಸ್ತ್ರೀ ಪುರುಷರು ಸಮಸ್ತರಿಗೆ ಹೇಳಿರುವ ನೀತಿ ಮುಖ್ಯವಾಗಿದೆ. ಇದರಲ್ಲಿ ಜಾತಿ, ಧರ್ಮ, ವರ್ಗ, ವರ್ಣ ಮೊದಲಾದ ಯಾವುದೇ ಪಕ್ಷಪಾತವಿಲ್ಲ.

ಜನಪದ ನೀತಿ ಗೀತೆಗಳನ್ನು ಸಾರ್ವಕಾಲಿಕ ಅಥವಾ ಶಾಶ್ವತ ನೀತಿಗೀತೆಗಳು ಮತ್ತು ತಾತ್ಕಾಲಿಕ ಅಥವಾ ಅಶಾಶ್ವತ ನೀತಿಗೀತೆಗಳು ಎಂದೂ ವಿಭಜಿಸಿಕೊಂಡು ಅಧ್ಯಯನ ಮಾಡಬಹುದು. ಧರ್ಮದ ಹಾಗೆಯೇ ನೀತಿಯೂ ಕೂಡ ಕಾಲಕಾಲಕ್ಕೆ ಬದಲಾಗಬಹುದು. ಒಂದು ಕಾಲಕ್ಕೆ ಸರ್ವಮಾನ್ಯವಾದ ನೀತಿ ಇನ್ನೊಂದು ಕಾಲಕ್ಕೆ ಅಪಥ್ಯವಾಗಬಹುದು. ಜೀವನ ವಿಧಾನ ಬದಲಾದಂತೆ ನೀತಿ ವಿಧಾನವೂ ಬದಲಾಗುತ್ತದೆ. ಒಂದು ಕಾಲದಲ್ಲಿ ಪ್ರಧಾನವಾಗಿದ್ದ ಅವಿಭಕ್ತ ಕುಟುಂಬ ವ್ಯವಸ್ಥೆ, ಬಹು ಪತ್ನಿತ್ವ ವ್ಯವಸ್ಥೆ, ಇಂದು ಸಾಕಷ್ಟು ಬದಲಾಗಿದೆ. ಎಷ್ಟೋ ಸಾಮಾಜಿಕ ಅನಿಷ್ಟಗಳು ಸುಧಾರಿಸುತ್ತಿವೆ. ಆದರೆ ಎಲ್ಲಾ ಕಾಲಕ್ಕೂ ನೀತಿ ಪ್ರಸ್ತುತವಾಗುತ್ತದೆ. ನೀತಿಯ ನೆಲಗಟ್ಟಿಲ್ಲದೆ ಯಾವ ಸಂಸ್ಕೃತಿಯೂ ಊರ್ಜಿತವಾಗಲಾರದು.

ಬದುಕಿನ ಮೌಲ್ಯವೇ ನೀತಿ. ಮೌಲ್ಯಾಧಾರಿತ ಬದುಕು ಮತ್ತು ಆದರ್ಶನೀತಿ ಪರಸ್ಪರ ಪೂರಕವಾಗಿವೆ. ಒಂದಿಲ್ಲದೆ ಮತ್ತೊಂದನ್ನು ಊಹಿಸುವುದೂ ಕಷ್ಟವಾಗುತ್ತದೆ. ನೀತಿಯ ಸಂದೇಶವಿಲ್ಲದ ಕಾಲವಿಲ್ಲ, ದೇಶವಿಲ್ಲ, ಜನಾಂಗವಿಲ್ಲ. ನೀತಿಯ ನಿರೂಪಣೆ, ಆಚರಣೆಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿರಬಹುದು ಅಷ್ಟೇ.

ನಮ್ಮ ಯುವಜನಾಂಗಕ್ಕೆ ನೀತಿಬೋಧೆ ಅಗತ್ಯವಾಗಿರಬೇಕು. ಆದರೆ ನೀತಿಬೋಧಕರಿಗೆ ಅರ್ಹತೆಯಿರಬೇಕು. ಹಿರಿಯರೂ ಕೂಡ ಆದರ್ಶವಾಗಿ ಜೀವನ ಸಾಗಿಸಬೇಕು. ಆಗ ಕಿರಿಯರು ಹಿರಿಯರನ್ನು ಅನುಕರಿಸುತ್ತಾರೆ. ನೀತಿಯ ಆಚರಣೆ ಏಕಮುಖವಾದುದಲ್ಲ; ಬಹುಮುಖವಾದದ್ದು. ನೀತಿ ಸಂದೇಶಗಳನ್ನು ತುಂಬಿಕೊಂಡಿದ್ದರೆ ಸಾಲದು; ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಆಚರಿಸುವ ಮನಸ್ಸುಗಳು ಬೇಕು. ನಾವು ನೀತಿಯನ್ನು ಸಂರಕ್ಷಿಸಿದರೆ, ನೀತಿ ನಮ್ಮನ್ನು ಸಂರಕ್ಷಿಸುತ್ತದೆ. ನೀತಿಕೆಟ್ಟರೆ ಸಂಸ್ಕೃತಿಯೂ ಕೆಡುತ್ತದೆ. ಸಂಸ್ಕೃತಿಯಿಲ್ಲದ ಜನ ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ.

* * *

ಗಂಡು ಮತ್ತು ಹೆಣ್ಣು ಬದುಕೆಂಬ ರಥದ ಎರಡು ಚಕ್ರಗಳು. ಇಬ್ಬರೂ ಜವಾಬ್ದಾರಿಯಿಂದ ನಡೆದುಕೊಂಡರೆ ಸಂಸಾರದ ಚಲನೆ ಸಲೀಸು. ಗಂಡಸು ಬದುಕಿಗೆ ಉಪಯೋಗವಾಗುವಂತೆ ಜನಪದ ಲೋಕ ಅವನನ್ನು ತಿದ್ದಿದೆ. ಶುದ್ಧ ಚಾರಿತ್ರ್ಯ ಯಾವುದು ? ಅಶುದ್ಧ ಚಾರಿತ್ರ್ಯ ಯಾವುದು ? ಹೇಗೆ ಬಾಳಿದರೆ ಬದುಕು ಸಾರ್ಥಕವಾಗುತ್ತದೆ ? ಹೆಣ್ಣು ಗಂಡಿನ ನಡುವಿನ ಸಂಬಂಧ ಹೇಗಿರಬೇಕು ? ಸಂಸಾರಸ್ಥರು ನಡತೆಯಲ್ಲಿ ಶುಚಿತ್ವವನ್ನು ಹೇಗೆ ಕಾಪಾಡಿಕೊಳ್ಳಬೇಕು ? ಎಂಬಿತ್ಯಾದಿ ಅಗತ್ಯ ವಿಷಯಗಳನ್ನು ನೀತಿಯ ಮೂಲಕ ಜನಪದ ಮನಸ್ಸು ಸಾದರಪಡಿಸಿದೆ. ಮೌಖಿಕ ಪರಂಪರೆಯಲ್ಲಿ ಜನಪದ ನೀತಿಸಂಹಿತೆ ನಿರಂತರವಾಗಿ ಸಾಗಿಬಂದಿದೆ. ಇದು ಜನಪದ ಶಿಕ್ಷಣದ ಒಂದು ಅಂಗ. ಅನುಭವಸ್ಥರ ಮಾತೇ ಜನಪದರಿಗೆ ವೇದ, ಉಪನಿಷತ್ತು. ಜನಪದರ ನೀತಿಸೂಕ್ತಿಗಳು ಮನನೀಯವಾಗಿವೆ; ಸ್ವಾಸ್ಥ್ಯ ಬದುಕಿಗೆ ಸಂಜೀವಿನಿಯಾಗಿವೆ; ಸಂಸ್ಕೃತಿಯ ಸಾಕ್ಷಿಯಾಗಿವೆ. ಇವು ಅರ್ಥಪೂರ್ಣವಾದ ವಿವೇಚನೆಗೆ ಅವಕಾಶ ನೀಡುತ್ತವೆ.

ಗಂಡಸನ್ನು ಉದ್ದೇಶಿಸಿ ಜನಪದ ಸಾಹಿತ್ಯದಲ್ಲಿ ಕಾಣಿಸಿಕೊಂಡಿರುವ ನೀತಿಗಳನ್ನು ಪ್ರಸ್ತುತ ಗ್ರಂಥದಲ್ಲಿ ಸೋದಾಹರಣವಾಗಿ ಪರಿಚಯಿಸಿದೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ಬೆಂಗಳೂರು